ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಬಿ.ಎಡ್. ಪದವಿ ಶಿಕ್ಷಣಕ್ರಮ ವಿವರಣಾ ಪುಸ್ತಕ

2025–26

(ಜುಲೈ – ಆಗಸ್ಟ್ ಆವೃತ್ತಿ)

ವೆಬ್‌ಸೈಟ್: www.ksoumysuru.ac.in

ಇಪಿಎಬಿಎಕ್ಸ್ ಸಂಖ್ಯೆಗಳು : 0821–2519948, 2519941, 2519943, 2519952

ಸಹಾಯವಾಣಿ ಸಂಖ್ಯೆ: 8690544544

- ಆನ್–ಲೈನ್ ಅರ್ಜಿಯನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಸಲ್ಲಿಸಬೇಕು.
- ಆನ್–ಲೈನ್ ಅರ್ಜಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಸಲ್ಲಿಸತಕ್ಕದ್ದು.

ಪ್ರಮುಖ ದಿನಾಂಕಗಳು	
ಆನ್–ಲೈನ್ ಅರ್ಜಿ ದೊರೆಯುವಿಕೆ	01–09–2025
ಆನ್–ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ	21–09–2025
ಸಾಮಾನ್ಯ ಪ್ರವೇಶ ಪರೀಕ್ಷೆ ದಿನಾಂಕ	**28–09–2025**

ಪ್ರವೇಶಾತಿ ಹಂತಗಳು

ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದಕ್ಕೆ ಮೊದಲು ಅಭ್ಯರ್ಥಿಗಳು ವಿವರಣಾ ಪುಸ್ತಕದಲ್ಲಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಬೇಕು.

ಬಿ.ಇಡಿ. ಶೈಕ್ಷಣಿಕ ಕಾರ್ಯಕ್ರಮಕ್ಕೆ ಪ್ರವೇಶಾತಿ ಅರ್ಜಿಯನ್ನು ಈ ಕೆಳಗಿನ ಯಾವುದಾದರೂ ಒಂದು ಮಾರ್ಗದ ಮುಖಾಂತರ ಪಡೆದುಕೊಳ್ಳಬಹುದು.

- ಅಭ್ಯರ್ಥಿಯು ಕರಾಮುವಿಯ ಜಾಲತಾಣ www.ksoumysuru.ac.in ಗೆ ಭೇಟಿ ನೀಡಿ ಪ್ರವೇಶಾತಿ ಪೋರ್ಟಲ್ ಮೇಲೆ ಕ್ಲಿಕ್ ಮಾಡುವುದು.
- ಅಭ್ಯರ್ಥಿಯು ಸ್ಕ್ಯಾನ್ ಮಾಡಿದ ಸ್ವ–ದೃಢೀಕೃತ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು.
- ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷಾ ಶುಲ್ಕ ರೂ. 2200/– ಆನ್‌ಲೈನ್ ಮೂಲಕ ಪಾವತಿ ಮಾಡಬೇಕು.
- ಅಭ್ಯರ್ಥಿಗಳು ಪ್ರವೇಶಾತಿ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.

ವಿಶೇಷ ಗಮನಕ್ಕೆ

- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಶ್ರೇಣಿ ಅನ್ನು ಹೊಂದಿದೆ.**
- ರಾಜ್ಯ ಸರ್ಕಾರದಿಂದ, ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ದೂರ ಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿ ಘೋಷಿಸಲ್ಪಟ್ಟಿರುತ್ತದೆ (ಸರ್ಕಾರದ ರಾಜ್ಯ ಪತ್ರದಲ್ಲಿನ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 43 ಶಾಸನ 2020, ದಿನಾಂಕ:30-12-2020)
- 2023-24 ರಿಂದ 2027-28 ರವರೆಗೆ ವಿಶ್ವವಿದ್ಯಾನಿಲಯವು ನೀಡುತ್ತಿರುವ ಕಾರ್ಯಕ್ರಮಗಳನ್ನು UGC ಯಿಂದ ಅನುಮೋದಿಸಲಾಗಿದೆ. ಅಧಿಸೂಚನೆ ಸಂಖ್ಯೆ: UGC-DB ಪತ್ರ ಸಂಖ್ಯೆ: 4-1/2023 (DEB-III), ದಿನಾಂಕ: 16.06.2023 ಮತ್ತು F.No.4-1/2023 (DEB-III) ದಿನಾಂಕ: 04.06.2023
- 2023-24 ರಿಂದ 2027-28 ರವರೆಗೆ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲು ಕರಾಮುವಿ ನಿಲಯವು UGC ಯಿಂದ ಅರ್ಹತೆ ಪಡೆದಿರುತ್ತದೆ (Entitled by UGC). ಅಧಿಸೂಚನೆ ಸಂಖ್ಯೆ: UGC-DB ಪತ್ರ ಸಂಖ್ಯೆ: 39-2/2023 (DEB-I), ದಿನಾಂಕ: 17.08.2023.
- Standing Appellate Committee (SAC) ಶಿಫಾರಸ್ಸಿನ ಆಧಾರದ ಮೇಲೆ, UGC(DEB) ತನ್ನ ಇಮೇಲ್ ಪತ್ರದ ದಿನಾಂಕ:28-08-2025 ರಲ್ಲಿ ವಿವಿಯು 2025-26 ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಿಂದ ಬಿ.ಎಡ್ ಕಾರ್ಯಕ್ರಮವನ್ನು ನಡೆಸುವಂತೆ ನಿರ್ದೇಶನ ನೀಡಿದೆ.
- ಯು.ಜಿ.ಸಿ ಮಾನ್ಯತೆಯೊಂದಿಗೆ ಎ.ಐ.ಸಿ.ಟಿ.ಇ ಮಾನ್ಯತೆ ಹೊಂದಿರುವ ಶಿಕ್ಷಣ ಕ್ರಮಗಳಿಗೆ (ಎಂ.ಬಿ.ಎ, ಎಂ.ಎಸ್ಸಿ - ಡೇಟಾ ಸೈನ್ಸ್ ಮತ್ತು ಎಂ.ಸಿ.ಎ) 2026-27 ರವರೆಗೆ ಮಾನ್ಯತೆ ಹೊಂದಿದೆ.
- ಯು.ಜಿ.ಸಿ. ಯು ಆರಿಂದಾಗ್ಗೆ ನೀಡುವ ಸಾರ್ವಜನಿಕ ಪ್ರಕಟಣೆಗಳಲ್ಲಿ - ದೂರ ಶಿಕ್ಷಣಕ್ರಮದ ಮೂಲಕ ನೀಡುವ ಎಲ್ಲಾ ಪದವಿ/ ಡಿಪ್ಲೊಮಾ/ ಸರ್ಟಿಫಿಕೇಟ್ ಶಿಕ್ಷಣಕ್ರಮಗಳು, ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ನೀಡುವ ಪದವಿ/ ಡಿಪ್ಲೊಮಾ/ ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳಿಗೆ ಸಮಾನವಾಗಿರುತ್ತದೆಂದು ತಿಳಿಸುತ್ತದೆ. ದೂರಶಿಕ್ಷಣದ ಮೂಲಕ ನೀಡುವ ಪದವಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರ, ಖಾಸಗಿ ಸಂಸ್ಥೆ, ಬಹುರಾಷ್ಟ್ರೀಯ ಕಂಪನಿಗಳ ಉದ್ಯೋಗ ಹಾಗೂ ಇನ್ನಿತರ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ವಿದ್ಯಾಭ್ಯಾಸ ಮುಂದುವರೆಸಲು ಮಾನ್ಯತೆ ಪಡೆದಿರುತ್ತವೆ.
- ವಿಶ್ವವಿದ್ಯಾನಿಲಯವು ಯು.ಜಿ.ಸಿ.ಯಿಂದ ಮಾನ್ಯತೆ ಹೊಂದಿದ್ದು, ಮಾನ್ಯತೆ ಹೊಂದಿದ ಈ ಅವಧಿಯಲ್ಲಿ ಪ್ರವೇಶಾತಿ ಪಡೆದ ದಿನದಿಂದ ಶಿಕ್ಷಣಕ್ರಮವು ಪೂರ್ಣಗೊಳ್ಳುವವರೆಗೂ ಮಾನ್ಯತೆ ಇರುತ್ತದೆ. ಮುಂದಿನ ವರ್ಷಗಳಲ್ಲಿ ವಿಶ್ವವಿದ್ಯಾನಿಲಯವು ಮಾನ್ಯತೆಯನ್ನು ಪಡೆಯದಿದ್ದರೂ ಪ್ರವೇಶ ಪಡೆದ ದಿನದಿಂದ ಶಿಕ್ಷಣಕ್ರಮ ಪೂರ್ಣಗೊಳ್ಳುವವರೆಗೂ ಮಾನ್ಯತೆ ಹೊಂದಿರುತ್ತದೆ.
- ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುತ್ತದೆ. ಹೊರರಾಜ್ಯದ ಅಭ್ಯರ್ಥಿಗಳು ಶಿಕ್ಷಣಕ್ರಮಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ, ಅವರು ಕರ್ನಾಟಕ ರಾಜ್ಯದೊಳಗಿನ ಯಾವುದಾದರೂ ಪ್ರಾದೇಶಿಕ ಕೇಂದ್ರ/ ಕೇಂದ್ರ ಸ್ಥಾನದಲ್ಲಿ ಪ್ರವೇಶಾತಿಯನ್ನು ಪಡೆಯಬೇಕು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಸೃಜಿಸಲು ಸಾಮರ್ಥ್ಯ ನಿರ್ಮಾಣದ ಮೂಲಕ ಸಹಾಯ ಮಾಡುತ್ತಿದೆ.
- ಉಚಿತ ವೈಫೈ ಸೌಲಭ್ಯಕ್ಕಾಗಿ ನಿರ್ದೇಶಕರು, ಐಟಿ ವಿಭಾಗ, ಕರಾಮುವಿ, ಮೈಸೂರು ಇವರಿಗೆ ಇಮೇಲ್ directoritksou@gmail.com ಮುಖಾಂತರ ಸಂಪರ್ಕಿಸಬಹುದು.

ಪರಿವಿಡಿ

ಕ್ರ.ಸಂ.	ವಿವರಗಳು	ಪುಟ ಸಂಖ್ಯೆ
	ಕುಲಪತಿಗಳ ಸಂದೇಶ	iv
	ವಿಶ್ವವಿದ್ಯಾನಿಲಯವನ್ನು ಕುರಿತು	v
	ವ್ಯವಸ್ಥಾಪನಾ ಮಂಡಳಿ	vi
	ವಿಶ್ವವಿದ್ಯಾನಿಲಯದ ಅಧಿಕಾರಿಗಳು	vi
01	ಯುಜಿಸಿ (ಮುಕ್ತ ಮತ್ತು ದೂರ ಕಲಿಕಾ) ನಿಯಮಾವಳಿಗಳು – 2017	1
02	ಸ್ಕೂಲ್ಸ್ ಆಫ್ ಸ್ಟಡೀಸ್	1
03	ಖಾಯಂ ಅಧ್ಯಾಪಕರ ವಿವರ	1
04	ಸಂಪರ್ಕಿಸಬಹುದಾದ ಇತರ ಅಧಿಕಾರಿಗಳು	2
05	ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು	2–4
06	ಶಿಕ್ಷಣಕ್ರಮ ಸಂರಚನೆ – ಬಿ.ಎಡ್.	4–6
07.	ಆಯ್ಕೆಯ ನಿರ್ಣಾಯಕಗಳು	6–8
08	ಶುಲ್ಕ ವಿನ್ಯಾಸ – ಬಿ.ಎಡ್. ಶಿಕ್ಷಣ ಕ್ರಮ	9
09	ಅಧ್ಯಯನದ ಕೋರ್ಸ್‌ಗಳು	9–10
10.	ಬೋಧನಾ ವ್ಯವಸ್ಥೆ	10–12
11.	ಪರೀಕ್ಷಾ ಕ್ರಮ	13
12.	ಪ್ರವೇಶಕ್ಕೆ ಅರ್ಜಿ ಸಲ್ಲಿಸುವುದು ಹೇಗೆ?	14
13.	ಮೌಲ್ಯಮಾಪನ	15–16
14.	ಕೌಶಲ್ಯ ಅಭಿವೃದ್ಧಿ ತರಬೇತಿ	16–17
15.	ತಾತ್ಕಾಲಿಕ ಶೈಕ್ಷಣಿಕ ಯೋಜನೆ	17–18
16.	ವಿದ್ಯಾರ್ಥಿ ಬೆಂಬಲ ಸೇವೆಗಳು	18–21
17	ಪ್ರವೇಶಾತಿ ಶುಲ್ಕದ ಮಾಹಿತಿ	21
18	ಪರೀಕ್ಷಾ ನೀತಿಯ ಬಗ್ಗೆ ಮಾಹಿತಿ	21–23
19	ಅಭ್ಯರ್ಥಿಗಳಿಗೆ ಪರೀಕ್ಷೆ ಕುರಿತ ಮಾಹಿತಿ	23–24
20	ಘಟಿಕೋತ್ಸವ ಪ್ರಮಾಣಪತ್ರ (ಪದವಿ ಪ್ರಮಾಣಪತ್ರ)	24
21	ಗುಣಾತ್ಮಕ ಕ್ರಮಗಳು	24
22	ಮಾಹಿತಿ ಮತ್ತು ಮಾರ್ಗದರ್ಶನ ಘಟಕ	24–25
23	ಕುಂದುಕೊರತೆ ನಿವಾರಣಾ ಘಟಕ	25
24	ವಿಶ್ವವಿದ್ಯಾನಿಲಯವು ನೀಡುತ್ತಿರುವ ಇತರೇ ಶಿಕ್ಷಣ ಕ್ರಮಗಳು	26
25	ಇತರೆ ಮಾಹಿತಿಗಳು	26–28
26	ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಡಿಜಿಟಲ್ ಉಪಕ್ರಮಗಳು– ಯುಜಿಸಿ	28–29
	ಅನುಬಂಧ–I –ಯುಜಿಸಿ ನೀಡಿರುವ ಮಾನ್ಯತಾ ಪತ್ರ	30
	ಅನುಬಂಧ–II–ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳ ಪಟ್ಟಿ	31–33
	ಅನುಬಂಧ–III–ಪ್ರವೇಶಾತಿ ಶುಲ್ಕ ಸಂರಚನೆ	34
	ಅನುಬಂಧ–IV–ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ರಹಿತ ಪ್ರವೇಶಾತಿ – ಸಮಾಜಕಲ್ಯಾಣ ಇಲಾಖೆಯ ಶುಲ್ಕ ಮರುಭರಿಕೆ ಆಧರಿಸಿ	35–42
	ಅನುಬಂಧ–V–ಸಾಮಾನ್ಯ ಶುಲ್ಕಗಳ ವಿವರ	43–44
	ಅನುಬಂಧ–VI– ಮಾದರಿ ಪ್ರಶ್ನೆಗಳು (Model Questions)	45–46
	ಅನುಬಂಧ–VII–OMR ಮಾದರಿ (Speciman copy of OMR)	47–48
	ಅನುಬಂಧ–VIII– NCTE ಮಾನ್ಯತೆ	

ಕುಲಪತಿಗಳ ಸಂದೇಶ

ಪ್ರಿಯ ಕಲಿಕಾರ್ಥಿ,

ಪ್ರಸ್ತುತ ವಿವಿಯು ರಾಷ್ಟ್ರೀಯ ಮೌಲ್ಯಂಕನ ಮತ್ತು ಮೌಲ್ಯಮಾಪನ ಸಂಸ್ಥೆ (NAAC) ನಿಂದ ಮಾನ್ಯತೆ ಪಡೆದಿದೆ. ಕರಾಮುವಿ ಕುಟುಂಬವು, ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸಲು ಮಾತ್ರವಲ್ಲದೆ ನಿಮ್ಮ ವೃತ್ತಿ ಜೀವನದ ಆಶಯವನ್ನು ಪೂರೈಸಿಕೊಳ್ಳಲು ನೀವು ಆಯ್ಕೆ ಮಾಡಿಕೊಂಡಿರುವ ಶೈಕ್ಷಣಿಕ ಕಾರ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸುತ್ತದೆ.ರಾಜ್ಯ ಶಾಸನಸಭೆಯ ಅಧಿನಿಯಮದಿಂದ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾನಿಲಯವು ಅದ್ಭುತ ಶೈಕ್ಷಣಿಕ ಪರಿಸರವನ್ನು ಸೃಷ್ಟಿಸಿದೆ. ವಿಶ್ವವಿದ್ಯಾನಿಲಯವು ನೀಡುತ್ತಿರುವ ಶಿಕ್ಷಣಕ್ರಮಗಳು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಮಾನ್ಯತೆ ಹೊಂದಿವೆ. ಆದುದರಿಂದ ವಿಶ್ವವಿದ್ಯಾನಿಲಯದ ಪದವಿಗಳನ್ನು ದೇಶಾದ್ಯಂತ ಉದ್ಯೋಗ ಅವಕಾಶಗಳಿಗೆ ಮಾನ್ಯ ಮಾಡಲಾಗುತ್ತದೆ.

ವಿಶ್ವವಿದ್ಯಾನಿಲಯದ ಮೂಲ ಮೌಲ್ಯಗಳನ್ನು ಅದರ ದೃಷ್ಟಿಯಾದ '***ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ***'ಯಿಂದ ಪಡೆದುಕೊಳ್ಳಲಾಗಿದೆ. ಗುಣಮಟ್ಟದಿಂದ ಕೂಡಿದ ಉನ್ನತ ಶಿಕ್ಷಣವು ವಿಶ್ವವಿದ್ಯಾನಿಲಯದ ಗುರಿಯಾಗಿದೆ.

ವಿಶ್ವವಿದ್ಯಾನಿಲಯವು ತನ್ನ ಕಾರ್ಯ ನಿರ್ವಹಣೆಯಲ್ಲಿ 'ಸ್ಕೂಲ್' ಪರಿಕಲ್ಪನೆ'ಯನ್ನು ಅಳವಡಿಸಿಕೊಂಡಿದೆ.ಮಾನವಿಕ, ಸಮಾಜ ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣಶಾಸ್ತ್ರ, ಶಿಕ್ಷಣ ಮತ್ತು ವಿಜ್ಞಾನ ಹೀಗೆ ಆರು 'ಸ್ಕೂಲ್‌ಗಳಿದ್ದು ಪ್ರತಿಯೊಂದನ್ನು ಅಪಾರ ಅನುಭವವುಳ್ಳ ನಿರ್ದೇಶಕರು ಬದ್ಧತೆಯುಳ್ಳ ಶಿಕ್ಷಕರ ತಂಡದೊಂದಿಗೆ ಮುನ್ನಡೆಸುತ್ತಿದ್ದಾರೆ. ಜ್ಞಾನ ಆಧಾರಿತ ಸಮಾಜವನ್ನು ನಿರ್ಮಿಸಲು ಸಾಮರ್ಥ್ಯವುಳ್ಳ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲಗಳು ಪ್ರಸಕ್ತ ಪ್ರಪಂಚದ ತೀವ್ರತೆಗಳಿಗೆ ಅಗತ್ಯವೆಂದು ವಿಶ್ವವಿದ್ಯಾನಿಲಯವು ನಂಬುತ್ತದೆ. ವಿಶ್ವವಿದ್ಯಾನಿಲಯದ ಶಿಕ್ಷಣ ಕಾರ್ಯಕ್ರಮಗಳ ಶೈಕ್ಷಣಿಕ ಚಟುವಟಿಕೆಗಳು ಉತ್ತಮ ಸೌಲಭ್ಯವುಳ್ಳ, ಅಧ್ಯಯನ ವಿಭಾಗಗಳ ಮೂಲಕ ನಡೆಯುತ್ತಿದೆ. ಉತ್ತಮ ಶೈಕ್ಷಣಿಕ ಅರ್ಹತೆಯುಳ್ಳ ಬೋಧಕ ವರ್ಗ ಮತ್ತು ಅಷ್ಟೇ ಬದ್ಧತೆಯುಳ್ಳ ಬೋಧಕೇತರ ವರ್ಗವು ವಿಶ್ವವಿದ್ಯಾನಿಲಯಕ್ಕೆ ಒಂದು ಆಸ್ತಿಯಾಗಿದ್ದು ವಿದ್ಯಾರ್ಥಿಗಳ ಕಲ್ಯಾಣಕ್ಕೆ ಕಟಿಬದ್ಧವಾಗಿದೆ.

ವಿದ್ಯಾರ್ಥಿ ಬೆಂಬಲ ಸೇವೆಗೆ ವಿಶ್ವವಿದ್ಯಾನಿಲಯವು ಮೂರು ಹಂತಗಳ ವ್ಯವಸ್ಥೆಯನ್ನು ಹೊಂದಿದೆ. ಅವುಗಳೆಂದರೆ ಕೇಂದ್ರಸ್ಥಾನ, ಕರ್ನಾಟಕದಾದ್ಯಂತ ವ್ಯಾಪಿಸಿರುವ 'ಪ್ರಾದೇಶಿಕ ಕೇಂದ್ರ'ಗಳು ಮತ್ತು 'ಕಲಿಕಾರ್ಥಿ ಸಹಾಯ ಕೇಂದ್ರ'ಗಳು. ನಿಗದಿತ ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಬೋಧನೆ-ಕಲಿಕೆ ಪ್ರಕ್ರಿಯೆಗೆ ಒಳಪಡಬಹುದು.ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿಗಳು, ಪರಿಮಿತ ಶ್ರವ್ಯ-ದೃಶ್ಯ ಸಾಮಗ್ರಿಗಳು ಮತ್ತು ಸಮಾಲೋಚನೆ / ಸಂಪರ್ಕ ಕಾರ್ಯಕ್ರಮ ಇವುಗಳನ್ನು ತಲುಪಿಸಲು ವಿಶ್ವವಿದ್ಯಾನಿಲಯವು ಒಂದು ವ್ಯವಸ್ಥೆಯನ್ನು ಹೊಂದಿದೆ. ಈ ವ್ಯವಸ್ಥೆಗಳ ಮೂಲಕ ಒಬ್ಬ ವಿದ್ಯಾರ್ಥಿಯಾಗಿ ನೀವು ಜ್ಞಾನ ಮತ್ತು ಕೌಶಲವನ್ನು ಗಳಿಸಲು ಹೆಚ್ಚಿನ ಅವಕಾಶವನ್ನು ಹೊಂದಲಿದ್ದೀರಿ. ಶೈಕ್ಷಣಿಕ ಸಮಾಲೋಚಕರು, ನೀವು ಕಾರ್ಯಕ್ರಮಕ್ಕೆ ಸೇರಿದಾಗಿನಿಂದ ನಿಮ್ಮ ಗುರಿ ತಲುಪುವ ತನಕ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಸಮಾಜ ಮತ್ತು ದೇಶದ ಪ್ರಗತಿಗೆ ಉತ್ತಮ ಪ್ರಜೆಯಾಗಿ ಕೊಡುಗೆ ನೀಡುವಂತೆ ನಿಮ್ಮನ್ನು ಪರಿವರ್ತಿಸಲು ಅಗತ್ಯ ಜ್ಞಾನ ಮತ್ತು ಕೌಶಲಗಳನ್ನು ಸೂಕ್ತ ರೀತಿಯಲ್ಲಿ ಸಮ್ಮಿಳಿತಗೊಳಿಸಲಾಗುತ್ತದೆ.

ಯು.ಜಿ.ಸಿ ಯು ತನ್ನ ಸಾರ್ವಜನಿಕ ಪ್ರಕಟಣೆಯ ಮೂಲಕ ದೂರ ಶಿಕ್ಷಣ ಕ್ರಮದಲ್ಲಿ ನೀಡುವ ಎಲ್ಲಾ ಪದವಿ, ಡಿಪ್ಲೋಮೋ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ನೀಡುವ ಪದವಿ / ಡಿಪ್ಲೋಮಾ / ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳಿಗೆ ಸಮಾನವಾಗಿರುತ್ತವೆ. ದೂರ ಶಿಕ್ಷಣದ ಮೂಲಕ ಪಡೆದ ಪದವಿಗಳು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಬಹು ರಾಷ್ಟ್ರೀಯ ಕಂಪನಿಗಳು, ಖಾಸಗಿ ವಲಯ ಮೊದಲಾದೆಡೆಗಳಲ್ಲಿ ಉದ್ಯೋಗಕ್ಕೆ ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣವನ್ನು ಮುಂದುವರಿಸಲು ಮಾನ್ಯತೆ ಹೊಂದಿವೆ.

ವಿಶ್ವವಿದ್ಯಾನಿಲಯವು ತನ್ನ ಕೇಂದ್ರಸ್ಥಾನ, ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನೀಡುವ ಸೇವೆಗಳನ್ನು ಪಡೆದು ನೀವು ಒಳ್ಳೆಯ ಅನುಭವವನ್ನು ಹೊಂದುವಿರೆಂಬ ಭರವಸೆ ನನ್ನದಾಗಿದೆ.ನಿಮ್ಮ ಶೈಕ್ಷಣಿಕ ಪ್ರಯತ್ನಗಳಿಗೆ ಶುಭವಾಗಲೆಂದು ನಾನು ಹಾರೈಸುತ್ತೇನೆ.

ಪ್ರೊ.ಶರಣಪ್ಪ ವಿ. ಹಲಸೆ

ವಿಶ್ವವಿದ್ಯಾನಿಲಯವನ್ನು ಕುರಿತು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಅನುದಾನ ಆಯೋಗದ (ಮುಕ್ತ ಮತ್ತು ದೂರ ಶಿಕ್ಷಣ ಕಲಿಕೆ) ನಿಯಾಮಾವಳಿ 2020 ರನ್ವಯ ಮಾನ್ಯತೆ ಪಡೆದಿದೆ.

ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ಧ್ಯೇಯ ವಾಕ್ಯದೊಂದಿಗೆ ವಿಶ್ವವಿದ್ಯಾನಿಲಯವು 1996ರ ಜೂನ್‌ನಲ್ಲಿ ಸ್ಥಾಪಿತಗೊಂಡಿದೆ.ಜಾಗತೀಕರಣದ ಯುಗದಲ್ಲಿ ರಾಷ್ಟ್ರವು ಸಾಂಪ್ರದಾಯಿಕ ಅರ್ಥ ವ್ಯವಸ್ಥೆಯಿಂದ ಜಾಗತೀಕರಣದ ಮುಕ್ತ ಆರ್ಥಿಕ ವ್ಯವಸ್ಥೆಗೆ ಬದಲಾದ ಕಾರಣ ಇಂದು ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಂಡಿದೆ. ಈ ಸಂಕ್ರಮಣ ಸ್ಥಿತಿಯಿಂದಾಗಿ ಪ್ರಸ್ತುತ ಜ್ಞಾನವು ಕೇವಲ ತಥ್ಯಗಳ ಸಂಗ್ರಹಣೆಗಿಂತ ಆನ್ವಯಿಕೆಗೆ ಹೆಚ್ಚು ಮಹತ್ವ ಒದಗಿಸಿದೆ.ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸರ್ವಾಂಗೀಣ ಮಾನವ ವ್ಯಕ್ತಿತ್ವ ಅಭಿವೃದ್ಧಿಯ ಉದ್ದೇಶದಿಂದ ಪ್ರಸ್ತುತ ಜಾಗತಿಕ ಪರಿಸರಕ್ಕೆ ಹೊಂದಿಕೊಳ್ಳಲು ಜ್ಞಾನದ ಹಂಚಿಕೆಗಾಗಿ ಅಂತರ್ ಶಿಸ್ತೀಯ ಮಾರ್ಗವನ್ನು ಸಂಯೋಜಿಸಲು ಪ್ರಯತ್ನಿಸುತ್ತದೆ.

ಮೈಸೂರು ನಗರವು ಶ್ರೀಮಂತ ಸಾಂಪ್ರದಾಯಿಕ ಪರಂಪರೆಯ ಐತಿಹಾಸಿಕ ಕೇಂದ್ರವಾಗಿದ್ದು, ಶೈಕ್ಷಣಿಕವಾಗಿಯೂ ಮಹತ್ವದ ಸ್ಥಾನವನ್ನು ಪಡೆದಿದೆ. ಮಾನವ ಕಲ್ಯಾಣದ ಹಾದಿಯಲ್ಲಿ ಅಂತರಾಷ್ಟ್ರೀಯ ಮಟ್ಟದ ಧ್ಯೇಯೋದ್ದೇಶಗಳನ್ನು ಸಾಧಿಸಲು ಮುಕ್ತ ವಿಶ್ವವಿದ್ಯಾನಿಲಯವು ದಾರಿಯನ್ನು ತೆರೆದಿದೆ.ಉನ್ನತ ಶಿಕ್ಷಣದ ಸಾವಿರಾರು ಯುವ ಆಕಾಂಕ್ಷಿಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು 1996ರಲ್ಲಿ ಪ್ರತ್ಯೇಕ ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು.

ವಿಶ್ವವು ಬಹುದೊಡ್ಡ ಸವಾಲಿನೊಂದಿಗೆ 21ನೇ ಶತಮಾನವನ್ನು ಪ್ರವೇಶಿಸಿದೆ.ಪ್ರಪಂಚದ ಯಾವ ದೇಶವೂ ಈ ಸವಾಲಿಗೆ ಹೊರತಾಗಿಲ್ಲ. ಜಾಗತೀಕರಣದ ಪರಿಣಾಮವಾಗಿ ಜ್ಞಾನದ ಕ್ರಾಂತಿ ಹಾಗೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯು ಜಾಗತಿಕ ಮಟ್ಟದಲ್ಲಿ ಉಳಿವಿಗಾಗಿ ಸ್ಪರ್ಧೆಗೆ ಕಾರಣವಾಗಿದೆ.ಬದಲಾಗುತ್ತಿರುವ ಪ್ರಪಂಚದಲ್ಲಿ ಶಿಕ್ಷಣ ತಜ್ಞರು ಹಾಗು ಶಿಕ್ಷಣ ಯೋಜಕರನ್ನು ವಿಶ್ವವಿದ್ಯಾನಿಲಯದ ಪಾತ್ರವನ್ನು ಪುನರ್‌ವ್ಯಾಖ್ಯಾನಿಸುವಂತೆ ಮಾಡಿದೆ.ಜ್ಞಾನ ಭಂಡಾರವನ್ನು ನಿರ್ಮಿಸಲು ಶೈಕ್ಷಣಿಕ ಜ್ಞಾನವನ್ನು ಹೊಸ ಚಿಂತನೆ, ಹೊಸ ಮಾರ್ಗ, ಹೊಸ ಪರಿಕಲ್ಪನೆಯ ಜೊತೆ ಸಂಯೋಜನೆಗೊಳಿಸಿ ಅರೆಕುಶಲ ಹಾಗು ಕುಶಲ ರಹಿತ ಮಾನವ ಸಂಪನ್ಮೂಲವನ್ನು ವೃತ್ತಿಪರ ಕುಶಲ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸಬಹುದಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮೈಸೂರು ನಗರದ ಹೃದಯ ಭಾಗದಲ್ಲಿದ್ದು 50 ಎಕರೆ ವಿಸ್ತೀರ್ಣದ ಹಸಿರಾದ ಪರಿಸರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ವಿಶ್ವವಿದ್ಯಾನಿಲಯವು ಸ್ನಾತಕ, ಸ್ನಾತಕೋತ್ತರ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಹಾಗು ಪಿಜಿ ಡಿಪ್ಲೊಮಾ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ವಿವಿಧ ವಿಷಯಗಳಲ್ಲಿ ನಡೆಸುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಉತ್ತಮ ಸೌಲಭ್ಯವುಳ್ಳ 32 ಶೈಕ್ಷಣಿಕ ಅಧ್ಯಯನ ವಿಭಾಗಗಳಿವೆ. ವಿಶ್ವವಿದ್ಯಾನಿಲಯದ ಮುಖ್ಯ ಧ್ಯೇಯ ಸಮಾಜದ ಎಲ್ಲಾ ವರ್ಗಕ್ಕೆ ಶಿಕ್ಷಣವನ್ನು ಕಡಿಮೆ ಶುಲ್ಕದೊಂದಿಗೆ ನೀಡುವುದಾಗಿದೆ.

ವಿಶಿಷ್ಟ ಲಕ್ಷಣಗಳು

ಮುಕ್ತ ಮತ್ತು ದೂರ ಕಲಿಕಾ ವ್ಯವಸ್ಥೆಯು ಅದ್ವಿತೀಯವು ಹಾಗೂ ಸವಾಲುವುಳ್ಳದ್ದು ಆಗಿದೆ.ಏಕೆಂದರೆ ಮುಕ್ತ ಮತ್ತು ದೂರ ಕಲಿಕಾ ಕ್ರಮಕ್ಕೆ ಸೇರ್ಪಡೆಯಾಗುವ ಕಲಿಕಾರ್ಥಿಗಳು ವಿವಿಧ ಬಗೆಯ ಸಾಮಾಜಿಕ, ಆರ್ಥಿಕ ಹಿನ್ನೆಲೆಯೊಂದಿಗೆ ಹಾಗೂ ವಿಭಿನ್ನ ಕಲಿಕಾ ಹಿನ್ನೆಲೆಯನ್ನು ಹೊಂದಿರುವವರಾಗಿರುತ್ತಾರೆ. ಪ್ರಸ್ತುತ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಇಂತಹ ವಿದ್ಯಾರ್ಥಿಗಳ ನೈಜ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಹಾಗೂ ಇಂತಹ ವಿದ್ಯಾರ್ಥಿಗಳು ಹಲವಾರು ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾಗಿರುವ ಈ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಒದಗಿಸಲಾಗಿದೆ. ಇದಕ್ಕಾಗಿಯೇ ಈ ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಿದೆ. ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯವೆಂದರೆ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದೇ ಆಗಿದೆ. ಹೀಗಾಗಿ, ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಶಿಕ್ಷಣ ನೀಡಲಾಗುತ್ತಿದೆ.

1) ವಿವಿಧ ಕ್ರಮಗಳ ಮುಖಾಂತರ ಮಾರ್ಗದರ್ಶಕ ದೃಷ್ಟಿಕೋನವನ್ನು ಕಾರ್ಯಾತ್ಮಕ ಯೋಜನೆಯಾಗಿ ಪರಿವರ್ತಿಸುವುದು.
2) ಕೌಶಲ್ಯ ತರಬೇತಿ ಮುಖಾಂತರ ಉತ್ಕೃಷ್ಟ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದು.
3) ಶಿಕ್ಷಣವನ್ನು ಪೂರೈಸದೇ ಅರ್ಧದಲ್ಲಿ ಬಿಟ್ಟಿರುವ ಕಲಿಕಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಅವಕಾಶವನ್ನು ಒದಗಿಸುವುದು.
4) ಕಾರ್ಯನಿರತ ಉದ್ಯೋಗಿಗಳಿಗೆ ಉನ್ನತ ಜ್ಞಾನವನ್ನು ಗಳಿಸಿಕೊಳ್ಳಲು ಅವಕಾಶವನ್ನು ಒದಗಿಸುವುದು.
5) ಅಭ್ಯರ್ಥಿಗಳಿಗೆ ತಾವು ವಾಸಿಸುವ ಸ್ಥಳದಲ್ಲೇ ಉನ್ನತ ಶಿಕ್ಷಣವನ್ನು ಪಡೆಯಲು ಅವಕಾಶ ಒದಗಿಸುವುದು.
6) ಪಾರದರ್ಶಕವಾಗಿ ಪ್ರವೇಶವನ್ನು ಕಲ್ಪಿಸುವುದು.
7) ನಿರ್ಬಂಧಿತ ಕಲಿಕೆಯನ್ನು ಜಾಗತಿಕ ಆಧಾರಿತ ಕಲಿಕೆಗೆ ವರ್ಗಾಯಿಸುವುದು.
8) ಉನ್ನತ ಶಿಕ್ಷಣಕ್ಕೆ ನವೀನ ಪರಿಕಲ್ಪನೆ ಹಾಗೂ ಹೊಸ ಮಾರ್ಗವನ್ನು ಒದಗಿಸುವುದು.
9) ರಾಷ್ಟ್ರದ ಬೆಳವಣಿಗೆ ಸಾಧಿಸಲು ವಿವಿಧ ಉದ್ದೇಶದ ಅಂಶಗಳನ್ನು ಒದಗಿಸುವುದು.
10) ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸುವ ವಿಮರ್ಶಾತ್ಮಕ ಪಾತ್ರ ವಹಿಸುವುದು.
11) ಆಂತರಿಕ ಸಾಮರ್ಥ್ಯ ಬೆಳೆಸಿಕೊಳ್ಳುವಲ್ಲಿ ವಿದ್ಯಾರ್ಥಿಗೆ ಅವಶ್ಯಕ ಬೆಂಬಲ ಸೇವೆಗಳನ್ನು ಸೃಷ್ಟಿಸುವುದು

1.	ಕುಲಪತಿ, ಕರಾಮುವಿ	ಅಧ್ಯಕ್ಷರು
2.	ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
3.	ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
4.	ಕುಲಪತಿ, (ನಿರ್ಧಿಷ್ಟ ಪಡಿಸಬಹುದಾದಂತ ಅವಧಿಗೆ ಸರದಿಯ ಮೂಲಕ ನಾಮ ನಿರ್ದೇಶಿತರಾದ ಕರ್ನಾಟಕ ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳ ಒಬ್ಬರು ಕುಲಪತಿ)	ಸದಸ್ಯರು
5.	ಡೀನ್ (ಶೈಕ್ಷಣಿಕ), ಕರಾಮುವಿ	ಸದಸ್ಯರು
6.	ಸಮ ಕುಲಾಧಿಪತಿಗಳಿಂದ ನಾಮ ನಿರ್ದೇಶಿತರಾಗುವ ಶೈಕ್ಷಣಿಕ, ವೈಜ್ಞಾನಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿನ ಐವರು ಗಣ್ಯ ವ್ಯಕ್ತಿಗಳು	ಸದಸ್ಯರುಗಳು
7.	ಕರ್ನಾಟಕ ವಿಧಾನಸಭಾ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು	ಸದಸ್ಯರುಗಳು
8.	ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು	ಸದಸ್ಯರುಗಳು
9.	ಕುಲಸಚಿವ, ಕರಾಮುವಿ	ಕಾರ್ಯದರ್ಶಿ

ವ್ಯವಸ್ಥಾಪನಾ ಮಂಡಳಿ ಸದಸ್ಯರು

ವಿಶ್ವವಿದ್ಯಾನಿಲಯದ ಅಧಿಕಾರಿಗಳು

ಶ್ರೀ ಥಾವರ ಚಂದ್ ಗೆಹ್ಲೋಟ್
ಕುಲಾಧಿಪತಿಗಳು
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

↓

ಡಾ. ಎಂ.ಸಿ ಸುಧಾಕರ
ಸಮಕುಲಾಧಿಪತಿಗಳು
ಗೌರವಾನ್ವಿತ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ

↓

ಪ್ರೊ. ಶರಣಪ್ಪ ವಿ.ಹಲಸೆ
ಕುಲಪತಿ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

↓

ಪ್ರೊ. ನವೀನ್ ಕುಮಾರ್ ಎಸ್.ಕೆ
ಕುಲಸಚಿವ

↓

ಪ್ರೊ. ರಾಮನಾಥಂ ನಾಯ್ಡು ಡೀನ್ (ಶೈಕ್ಷಣಿಕ)	**ಡಾ.ಆನಂದ್ ಕುಮಾರ್ ಎಸ್** ಕುಲಸಚಿವ (ಪರೀಕ್ಷಾಂಗ)	**ಡಾ. ನಿರಂಜನ ರಾಜ್ .ಎಸ್** ಹಣಕಾಸು ಅಧಿಕಾರಿ (ಕಾ/ಭಾ) ಮತ್ತು ನಿರ್ದೇಶಕರು, ಸಿಐಕ್ಯೂಎ	**ಡಾ. ಎನ್.ಆರ್ ಚಂದ್ರೇಗೌಡ** ಡೀನ್ (ಅಧ್ಯಯನ ಕೇಂದ್ರಗಳು)	**ಶ್ರೀಮತಿ ಸುನಿತ** **ನಿರ್ದೇಶಕರು ಐ.ಟಿ.**	**ಶ್ರೀ.ಎಂ.ವಿ ನಂದೀಶ** **ನಿರ್ದೇಶಕರು, ಪ್ರವೇಶಾತಿ**

1. ಯು.ಜಿ.ಸಿ ಮುಕ್ತ ಮತ್ತು ದೂರ ಶಿಕ್ಷಣ ನಿಯಮಾವಳಿ–2020

ಭಾರತ ಸರ್ಕಾರದ ಅಧಿಕೃತ ರಾಜ್ಯಪತ್ರದ ದಿನಾಂಕ: 23–06–2017ರಂದು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಮುಕ್ತ ಮತ್ತು ದೂರ ಕಲಿಕೆಗೆ ಸಂಬಂಧಿಸಿದಂತೆ ಕ್ಲಾಸ್ (ಜೆ)ಯ ಸೆಕ್ಷನ್ 12(5) ನ್ನು ಓದಿಕೊಂಡಂತೆ ಸೆಕ್ಷನ್ 26 (1)ರ ಅನ್ವಯ (ODL)ನಿಯಾಮಾವಳಿಗಳನ್ನು ಪ್ರಕಟಿಸಿದೆ. ಮುಕ್ತ ಮತ್ತು ದೂರ ಶಿಕ್ಷಣವನ್ನು ನೀಡುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಈ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಯುಜಿಸಿಯು ಶೈಕ್ಷಣಿಕ ಆಡಳಿತದಲ್ಲಿ ಸ್ಕೂಲ್ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಬೇಕೆಂದು ನಿರ್ದೇಶಿಸಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿಯಿಂದ ಮಾನ್ಯತೆಯನ್ನು ಹೊಂದಿದ್ದು, ಈ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುತ್ತಿದೆ.

ಕರಾಮುವಿಯಿಂದ ನೀಡಲ್ಪಡುತ್ತಿರುವ ಬಿ.ಎಡ್. ಶಿಕ್ಷಣ ಕ್ರಮವು ಎನ್.ಸಿ.ಟಿ.ಇ ನಿಯಮಾವಳಿಗಳನ್ನು ಕಡ್ಡಾಯವಾಗಿ ಅಳವಡಿಸಿಕೊಂಡು ವಿನ್ಯಾಸಿತವಾಗಿದೆ.

2. ಸ್ಕೂಲ್ಸ್ ಆಫ್ ಸ್ಟಡೀಸ್

ವಿಶ್ವವಿದ್ಯಾನಿಲಯಅನುದಾನ ಆಯೋಗದ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾನಿಲಯವು ಐದು ಸ್ಕೂಲ್ ಆಫ್ ಸ್ಟಡೀಸ್‌ಗಳನ್ನು ಸ್ಥಾಪಿಸಿದೆ. ಈ ಮುಂದಿನ ಸ್ಕೂಲ್ ಆಫ್ ಸ್ಟಡೀಸ್‌ಗಳು ಸ್ಕೂಲ್ ನಿರ್ದೇಶಕರುಗಳ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತವೆ.

1.	ನಿಕಾಯ : ಮಾನವಿಕ (ಭಾಷಾ ವಿಭಾಗಗಳು)	-	ಪ್ರೊ. ರಾಮನಾಥಂ ನಾಯ್ಡು ಎಂ
2.	ನಿಕಾಯ : ಸಾಮಾಜಿಕ ವಿಜ್ಞಾನ	-	ಪ್ರೊ. ಶಂಕರನಾರಾಣಪ್ಪ
3.	ನಿಕಾಯ : ವಾಣಿಜ್ಯ ಶಾಸ್ತ್ರ	-	ಪ್ರೊ. ರಮಾನಂದ ಎಂ.ಎಸ್
4.	ನಿಕಾಯ : ನಿರ್ವಹಣಾಶಾಸ್ತ್ರ	-	ಪ್ರೊ. ಸಿ. ಮಹದೇವಮೂರ್ತಿ
5.	ನಿಕಾಯ : ವಿಜ್ಞಾನ	-	ಪ್ರೊ.ಎನ್.ಜಿ ರಾಜು
6.	ನಿಕಾಯ : ಶಿಕ್ಷಣಶಾಸ್ತ್ರ	-	ಪ್ರೊ. ನಿರಂಜನ್ ರಾಜ್.ಎಸ್

ಸ್ಕೂಲ್‌ಗಳ ಕೆಳಗೆ ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ಕಾರ್ಯನಿರ್ವಹಿಸುತ್ತವೆ.

I. ಮಾನವಿಕ (ಭಾಷಾ ವಿಭಾಗಗಳು) ಒಳಗೊಂಡಿರುವ ವಿಭಾಗಗಳು

1. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
2. ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ
3. ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ
4. ಸಂಸ್ಕೃತ ವಿಭಾಗ
5. ಉರ್ದು ವಿಭಾಗ
6. ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ
7. ಭಾಷಾವಿಜ್ಞಾನ ಅಧ್ಯಯನ ವಿಭಾಗ

II. ಸಮಾಜ ವಿಜ್ಞಾನ ನಿಕಾಯಗಳು ಒಳಗೊಂಡಿರುವ ವಿಭಾಗಗಳು

1. ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
2. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ
3. ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
4. ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
5. ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ
6. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
7. ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

III. ವಾಣಿಜ್ಯ ವಿಭಾಗಗಳು

ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

IV. ನಿರ್ವಹಣಾಶಾಸ್ತ್ರ ವಿಭಾಗಗಳು

ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

V. ವಿಜ್ಞಾನ ನಿಕಾಯಗಳು ಒಳಗೊಂಡಿರುವ ವಿಭಾಗಗಳು

1. ಜೀವ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
2. ಜೈವಿಕ ತಂತ್ರಜ್ಞಾನ ಮತ್ತು ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
3. ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
4. ಗಣಕ ವಿಜ್ಞಾನ ವಿಭಾಗ
5. ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
6. ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
7. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
8. ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
9. ಸೂಕ್ಷ್ಮಜೀವಶಾಸ್ತ್ರ ಮತ್ತು ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
10. ಭೌತಶಾಸ್ತ್ರ ವಿಭಾಗ
11. ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ಅಧ್ಯಯನ ಮತ್ತು ಸಂಶೋಧನಾ ವಿಭಾಗ
12. ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
13. ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ

3. ಶಿಕ್ಷಣಶಾಸ್ತ್ರ ವಿಭಾಗ – ಅಧ್ಯಾಪಕರ ವಿವರ

ಕ್ರ. ಸಂ.	ಅಧ್ಯಾಪಕರ ಹೆಸರು	ಹುದ್ದೆ	ವಿದ್ಯಾರ್ಹತೆ	ವಿಶೇಷ ತಜ್ಞತೆ	ಸೇವಾನುಭವ ವರ್ಷಗಳಲ್ಲಿ	ದೂರವಾಣಿ ಸಂಖ್ಯೆ
01.	ಡಾ. ಕೃಷ್ಣಪ್ಪ ಎನ್	ಸಹ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು	ಎಂ.ಎ. ಎಂ.ಇಡಿ, ಎಂ.ಫಿಲ್, ಪಿಹೆಚ್.ಡಿ	ಸಂಶೋಧನ ವಿಧಾನಗಳು	23	9964574944
02	ಡಾ. ಶರಣಮ್ಮ ಆರ್	ಸಹ ಪ್ರಾಧ್ಯಾಪಕರು	ಎಂ.ಇಡಿ, ಪಿಹೆಚ್.ಡಿ	ಎಜುಕೇಷನ್ ಅಡ್ಮಿನಿಸ್ಟ್ರೇಷನ್	26	9739970866
03	ಡಾ. ಜಾನಕಿ ಎಂ	ಸಹಾಯಕ ಪ್ರಾಧ್ಯಾಪಕರು	ಎಂ.ಎಸ್ಸಿ, ಎಂ.ಇಡಿ, ಪಿಹೆಚ್.ಡಿ	ಎಜುಕೇಷನ್ ಸೈಕಾಲಜಿ	23	9945024886
04	ಡಾ. ಶೈಲಜಾ ಪಿ. ಶಾನಭಾಗ	ಸಹಾಯಕ ಪ್ರಾಧ್ಯಾಪಕರು	ಎಂ.ಎ, ಎಂ.ಇಡಿ, ಪಿಹೆಚ್.ಡಿ	ಎಜುಕೇಷನ್ ಟೆಕ್ನಾಲಜಿ	24	9483760099
05	ಡಾ. ಸುನಂದ ಹೆಚ್	ಸಹಾಯಕ ಪ್ರಾಧ್ಯಾಪಕರು (ಗುತ್ತಿಗೆ ಆಧಾರ)	ಎಂ.ಇಡಿ, ಎಂ.ಎ, ಪಿಹೆಚ್.ಡಿ, ಎಂ.ಎಸ್ಸಿ, ಕೆ-ಸೆಟ್	ವಿಶೇಷ ಶಿಕ್ಷಣ	07	8073450309
06	ಪಲ್ಲವಿ ಎಂ	ಸಹಾಯಕ ಪ್ರಾಧ್ಯಾಪಕರು (ಅತಿಥಿ ಉಪನ್ಯಾಸಕರು)	ಎಂ.ಎಸ್ಸಿ., ಎ.ಇಡ್., ಕೆ-ಸೆಟ್	ಕಮ್ಯೂನಿಕೇಶನ್ ಸ್ಕಿಲ್	09	8105048563
07	ಶ್ರೀನಿವಾಸ ಟಿ.ಎನ್	ಸಹಾಯಕ ಪ್ರಾಧ್ಯಾಪಕರು (ಅತಿಥಿ ಉಪನ್ಯಾಸಕರು)	ಎಂ.ಎಸ್ಸಿ., ಎ.ಇಡ್.,ಎಂ.ಎ., ಎಂ.ಫಿಲ್., ಕೆ-ಸೆಟ್	ಟ್ರೇಸ್ ಮ್ಯಾನೇಜ್‌ಮೆಂಟ್	14	9845917125
08	ಡಾ. ಎನ್. ಲಕ್ಷ್ಮಿ	ಹಿರಿಯ ಪ್ರಾಧ್ಯಾಪಕರು (ನಿವೃತ್ತ)	ಎಂ.ಇಡಿ, ಪಿಹೆಚ್.ಡಿ	ಎಜುಕೇಷನ್ ಸೋಷಿಯಾಲಜಿ	28	9886917952
09	ಡಾ. ನಾಗೇಂದ್ರಕುಮಾರ್ ಆರ್	ಸಹ ಪ್ರಾಧ್ಯಾಪಕರು (ನಿವೃತ್ತ)	ಎಂ.ಎ, ಎಂ.ಇಡಿ, ಪಿಹೆಚ್.ಡಿ	ವಿಶೇಷ ಶಿಕ್ಷಣ	28	9980737186

ಬೋಧಕ ವರ್ಗದ ವೇತನ ಶ್ರೇಣಿ		
ಸಹಾಯಕ ಪ್ರಾಧ್ಯಾಪಕರು / ಸಹಾಯಕ ಗ್ರಂಥಪಾಲಕರು	ಸಹ ಪ್ರಾಧ್ಯಾಪಕರು / ಉಪ ಗ್ರಂಥಪಾಲಕರು	ಪ್ರಾಧ್ಯಾಪಕರು / ಗ್ರಂಥಪಾಲಕರು
57700-1,82,400 Academic Level 10	1,31,400-2,17,100 Academic Level 13A	1,44,200-2,18,200 Academic Level 14

EPABX Phone Lines : 0821-2519941 / 2519941 / 2519943 / 2519948 / 2519952

4. ಸಂಪರ್ಕಿಸಬಹುದಾದ ಇತರ ಅಧಿಕಾರಿಗಳು

ಕ್ರಮ ಸಂಖ್ಯೆ	ಅಧಿಕಾರಿಗಳು	ಹುದ್ದೆ	ಸಂಬಂಧಿಸಿದ ಮಾಹಿತಿಗಾಗಿ	ಸಂಖ್ಯೆ
1	ಡಾ. ನಿರಂಜನ್ ರಾಜ್ ಎಸ್	ಪ್ರಾಧ್ಯಾಪಕರು	ನಿರ್ದೇಶಕರು - ಸಿಐಕ್ಯೂಎ & ಪಿಎಂಇಜಿ	9886859350
2	ಪ್ರೊ. ಕವಿತ ರೈ	ಪ್ರಾಧ್ಯಾಪಕರು	ಸಂಯೋಜನಾಧಿಕಾರಿ – ಅಕ್ಕಮಹಾದೇವಿ ಅಧ್ಯಯನ ಪೀಠ	9482206129
3	ಡಾ. ಜಯಪಾಲ್	ಪ್ರಾಧ್ಯಾಪಕರು	Nodal Officer -Centre for Research on Social Inclussion	7406600034
4	ಡಾ. ಪವಿತ್ರ ಆರ್.ಹೆಚ್	ಪ್ರಾಧ್ಯಾಪಕರು	1. ಸಂಯೋಜಕರು – ಮಹಾತ್ಮ ಗಾಂಧೀಜಿ ಅಧ್ಯಯನ ಪೀಠ 2. ಪ್ಲೇಸ್‌ಮೆಂಟ್ ಅಧಿಕಾರಿ	9845659987
5	ಡಾ. ಶಲ್ವ ಪಿಳ್ಳೆ ಅಯ್ಯಂಗಾರ್	ಪ್ರಾಧ್ಯಾಪಕರು	1. ನೋಡಲ್ ಅಧಿಕಾರಿ – NAD 2. ಸಂಯೋಜನಾಧಿಕಾರಿ - ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠ 3. ವಿಶೇಷ ಅಧಿಕಾರಿ ಪರೀಕ್ಷೆ (ಸಹಭಾಗಿತ್ವ)	9686215043
6	ಡಾ. ರಾಜು ಎನ್.ಜಿ	ಪ್ರಾಧ್ಯಾಪಕರು	ಎ.ಐ.ಎಸ್.ಹೆಚ್.ಇ ನೋಡಲ್ ಅಧಿಕಾರಿ	9448267255
7	ಶ್ರೀಮತಿ ಸುನಿತ	ಸಹ ಪ್ರಾಧ್ಯಾಪಕರು	1. ನಿರ್ದೇಶಕರು – ಐ.ಟಿ 2. ನೋಡಲ್ ಅಧಿಕಾರಿ – ಎನ್.ಕೆ.ಎನ್ 3. ಐ.ಸಿ.ಟಿ. ಸಂಯೋಜನಾಧಿಕಾರಿ 4. ನಿರ್ದೇಶಕರು ಆನ್‌ಲೈನ್ ಪ್ರೋಗ್ರಾಮ್	9480326709
8	ಡಾ. ಮಂಜುನಾಥ ಸಿ.ಎಸ್	ಸಹಾಯಕ ಪ್ರಾಧ್ಯಾಪಕರು	ಸಹ ನಿರ್ದೇಶಕರು-ಸಿಐಕ್ಯೂಎ	8762100678
9	ಡಾ. ಮಹೇಶ ವಿ	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ - ಸಿ.ಐ.ಕ್ಯೂ.ಎ	9844667411
10	ಡಾ. ಹರ್ಷ ಟಿ.ಎಸ್	ಸಹಾಯಕ ಪ್ರಾಧ್ಯಾಪಕರು	1. ನೋಡಲ್ ಅಧಿಕಾರಿ – ವರ್ಚ್ಯುಲ್ ಲ್ಯಾಬ್ 2. ನೋಡಲ್ ಅಧಿಕಾರಿ – ಎಂಹೆಚ್‌ಆರ್‌ಡಿ – ಎನ್‌ಎಂಇ – ಐಸಿಟಿ 3. ನೋಡಲ್ ಅಧಿಕಾರಿ – ಎನ್‌ಜಿ&ಆರ್‌ಸಿ - ಪರೀಕ್ಷೆ 4. ನೋಡಲ್ ಅಧಿಕಾರಿ – ಪಿಹೆಚ್.ಡಿ. ಘಟಕ	944178802
11	ಡಾ. ಸಿ. ಅನಿತ	ಸಹಾಯಕ ಪ್ರಾಧ್ಯಾಪಕರು	ಪ್ರಧಾನ ಅನ್ವೇಷಕರು – ಇ-ವಿಷಯ ಅಭಿವೃದ್ಧಿ (UGC & NME-ICT)	9148531967
12	ಡಾ. ರಶ್ಮಿ ಜಿ.ಎಸ್	ಸಹಾಯಕ ಪ್ರಾಧ್ಯಾಪಕರು	1. ನೋಡಲ್ ಅಧಿಕಾರಿ – ಐ.ಸಿ.ಟಿ 2. ಸಂಯೋಜಕ UGC – MOOCS 3. ವಿಶೇಷ ಅಧಿಕಾರಿ – ಐ.ಟಿ	9880983081
13	ಡಾ. ರಾಜೇಶ್ವರಿ ಹೆಚ್	ಸಹಾಯಕ ಪ್ರಾಧ್ಯಾಪಕರು	1. ನಿರ್ದೇಶಕರು - ಸಂಶೋಧನೆ ಮತ್ತು ಅಭಿವೃದ್ಧಿ ಕೋಶ 2. ನ್ಯಾಕ್ ಸಂಯೋಜಕರು	9845528357
14	ಡಾ. ನಟರಾಜು ಜಿ	ಸಹಾಯಕ ಪ್ರಾಧ್ಯಾಪಕರು	ನೋಡಲ್ ಅಧಿಕಾರಿ – ಎ.ಐ.ಯು ಪೋರ್ಟಲ್	9741219820
15	ಶ್ರೀ ನಿರಂಜನ್ ಎಸ್.ವಿ	ಸಹಾಯಕ ಪ್ರಾಧ್ಯಾಪಕರು	ನೋಡಲ್ ಅಧಿಕಾರಿ – ಎ.ಐ.ಯು ಪೋರ್ಟಲ್	9535284356
16	ಡಾ. ಹೇಮಲತ ಎಂ.ಎಸ್	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿಗಳು - Intellectual Property Cell	9482566371
17	ಡಾ. ನಟರಾಜು ಅಂಗಸ್ವಾಮಿ	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿಗಳು - Centre for Innovation and Incubation	9620697355
18	ಡಾ. ಹೇಮಲತಾ	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ– ಜ್ಞಾನವಾಣಿ ಸ್ಟುಡಿಯೋ	9535282069

19	ಡಾ. ಪಿ.ಎಂ. ಚಿನ್ನಯ್ಯ	ಸಹಾಯಕ ಪ್ರಾಧ್ಯಾಪಕರು	ವಿಶೇಷಾಧಿಕಾರಿ – ವಿದ್ಯಾರ್ಥಿ ವೇತನ ಘಟಕ	9164556402
20	ಡಾ. ಸುಮತಿ ಆರ್. ಗೌಡ	ಸಹಾಯಕ ಪ್ರಾಧ್ಯಾಪಕರು	1. ನಿರ್ದೇಶಕ – CMKKY 2. ನೋಡಲ್ ಅಧಿಕಾರಿ – CEMCA 3. ವಿಷುಯಲ್ ಸ್ಟುಡಿಯೋ	9743363293
21	ಡಾ. ಆನಂದ್ ಗೌಡ ಎನ್	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ - ಭಾರತೀಯ ಸಂವಿಧಾನ ದಿನ	9916007312
22	ಡಾ. ಚಂದ್ರಶೇಖರ್ ಜೆ.ಎಸ್	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ – ಕೌಶಲ್ಯಾಭಿವೃದ್ಧಿ	9663061978
23	ಡಾ. ಶಿವಕುಮಾರ ಸ್ವಾಮಿ	ಸಹಾಯಕ ಪ್ರಾಧ್ಯಾಪಕರು	ಸಂಯೋಜಕರು- ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ	9972165817
24	ಡಾ. ಜ್ಯೋತಿ ಶಂಕರ್	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ - ಸ್ವಾಮಿ ವಿವೇಕನದ ಅಧ್ಯಯನ ಪೀಠ	9448603159
25	ಡಾ. ಚಂದ್ರೇಗೌಡ ಎನ್.ಆರ್	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ – ಕುವೆಂಪು ಸಂಶೋಧನಾ ಮತ್ತು ವಿಸರಣಾ ಕೇಂದ್ರ	9449668997
26	ಡಾ. ಶರಣಮ್ಮ ಆರ್	ಸಹಾಯಕ ಪ್ರಾಧ್ಯಾಪಕರು	ಸಂಯೋಜನಾಧಿಕಾರಿ – ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠ	9739970866
27	ಡಾ. ವಿ.ಎಂ. ರಮೇಶ	ಸಹಾಯಕ ಪ್ರಾಧ್ಯಾಪಕರು	1. ಸಂಯೋಜನಾಧಿಕಾರಿ, SCT/TSP 2. ಸಂಯೋಜನಾಧಿಕಾರಿ, ರಾಮಮನೋಹರ ಲೋಹಿಯಾ ಅಧ್ಯಯನ ಪೀಠ	9110698230
29	ಡಾ. ಸಂತೋಷ್ ನಾಯ್ಕ ಆರ್	ಸಹಾಯಕ ಪ್ರಾಧ್ಯಾಪಕರು	1. ಸಂಯೋಜನಾಧಿಕಾರಿ – ಡಾ. ಬಿ.ವಿ.ಕಾರಂತ ಅಧ್ಯಯನ ಪೀಠ 2. ಸಂಯೋಜನಾಧಿಕಾರಿ - ಸಾಮಾಜಿಕ ಮಾಧ್ಯಮ ಸಂಸ್ಥೆ 3. ಸಂಯೋಜನಾಧಿಕಾರಿ - ಪ್ರಸಾರಾಂಗ	9108260220
30	ಡಾ. ಪ್ರಕಾಶ್ ಕೆ	ಗ್ರಂಥಪಾಲಕರು	ಗ್ರಂಥಾಲಯ	9448066788
31	ಡಾ. ಗೋಪಾಲ ಸ್ವಾಮಿ	ಗ್ರಂಥಪಾಲಕರು	ಗ್ರಂಥಾಲಯ	9035125501
32	ಡಾ. ಶೀಲ ವಿ	ಗ್ರಂಥಪಾಲಕರು	ಗ್ರಂಥಾಲಯ	9341024224
33	ಶ್ರೀ ಎಂ.ವಿ. ನಂದೀಶ್	ಉಪಕುಲಸಚಿವ	ನಿರ್ದೇಶಕರು (ಪ್ರವೇಶಾತಿ) (ಹೆಚ್ಚುವಲ)	8618978213
34	ಶ್ರೀ ಚಂದ್ರೇಶ್ ಎಸ್.ಎಂ	ಉಪಕುಲಸಚಿವ	ಆಡಳಿತ ವಿಭಾಗ	8951242616
35	ಶ್ರೀ ಸುರೇಶ ಸಿ.ಪಿ	ಉಪಕುಲಸಚಿವ (ಸ್ವ/ಪ್ರ)	ಆಡಳಿತ ವಿಭಾಗ	9880813632
36	ಶ್ರೀ ದೀಪಕ್ ಎನ್	ಉಪಕುಲಸಚಿವ (ಸ್ವ/ಪ್ರ)	ಆಡಳಿತ ವಿಭಾಗ	8073317163
37	ಶ್ರೀ ವಿಶಾಲ್ ಎನ್. ರಾಜ್	ಉಪಕುಲಸಚಿವ (ಸ್ವ/ಪ್ರ)	ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ	9964305126
38	ಶ್ರೀ ಚಲುವಮೂರ್ತಿ ಆರ್	ಉಪಕುಲಸಚಿವ	ಡೀನ್ (ಶೈಕ್ಷಣಿಕ)	9980544074
39	ಶ್ರೀ ಸುರೇಶ	ಉಪಕುಲಸಚಿವ (ಸ್ವ/ಪ್ರ)	ಡೀನ್ (ಶೈಕ್ಷಣಿಕ)	9448600275
40	ಶ್ರೀ ಸತೀಶ್ ಎಸ್.ಎನ್	ಉಪಕುಲಸಚಿವ	ಪರೀಕ್ಷಾ ವಿಭಾಗ	9945364563
41	ಶ್ರೀಮತಿ ಅನುಪಮ ಲಕ್ಷ್ಮಣ್	ಉಪಕುಲಸಚಿವೆ	ಪರೀಕ್ಷಾ ವಿಭಾಗ	9480405592
42	ಶ್ರೀಮತಿ ದೀಪಶ್ರೀ	ಉಪಕುಲಸಚಿವೆ (ಸ್ವ.ಪ್ರ)	ಪರೀಕ್ಷಾ ವಿಭಾಗ	9945734313
43	ಶ್ರೀಮತಿ ಜಗದಾಂಬ ಜಿ	ಉಪಕುಲಸಚಿವೆ (ಸ್ವ.ಪ್ರ)	ಪರೀಕ್ಷಾ ವಿಭಾಗ	8073750192
44	ಶ್ರೀ ರಾಜಶೇಖರ ಹೆಚ್.ಆರ್	ಉಪಕುಲಸಚಿವ (ಸ್ವ.ಪ್ರ)	ಪರೀಕ್ಷಾ ವಿಭಾಗ	7975077609
45	ಶ್ರೀ ಸತೀಶ್ ಬಿ. ಕುಲ್ಕರ್ಣಿ	ಉಪಕುಲಸಚಿವ (ಸ್ವ.ಪ್ರ)	ಪರೀಕ್ಷಾ ವಿಭಾಗ	9845491995
46	ಶ್ರೀ ಪ್ರದೀಪ್ ರಿಲಿ ಎಸ್	ಉಪಕುಲಸಚಿವ (ಸ್ವ.ಪ್ರ)	ಸಂಯೋಜನಾಧಿಕಾರಿ, ವಿದ್ಯಾರ್ಥಿ ವೇತನ ಘಟಕ	9448601846
47	ಶ್ರೀ ಬಿ.ಜಿ. ವಿರುಪಾಕ್ಷಯ್ಯ	ಉಪ ನಿರ್ದೇಶಕ (ಸ್ವ.ಪ್ರ)	ಹಣಕಾಸು ವಿಭಾಗ	9986603699
48	ಶ್ರೀಮತಿ ಶೋಭ ಎಂ	ಉಪಕುಲಸಚಿವೆ (ಸ್ವ.ಪ್ರ)	ಐ.ಇ - ಐಪಿ ಜಿಆರ್ಎಸ್ & ಸಿಪಿಜಿಆರ್ಎಎಂಎಸ್	9663476572
49	ಶ್ರೀ ಶ್ರೀಧರ ಎಂ	ಉಪಕುಲಸಚಿವ (ಸ್ವ.ಪ್ರ)	ಡೀನ್ (ಅಧ್ಯಯನ ಕೇಂದ್ರಗಳು)	9731392627
50	ಶ್ರೀಮತಿ ನಳಿನಿ ಜಯರಾಮ್	ಉಪಕುಲಸಚಿವೆ (ಸ್ವ.ಪ್ರ)	ಬೋಧನಾ ಸಾಮಗ್ರಿ	9916231813
51	ಶ್ರೀ ನಾಗೇಂದ್ರ ಆರ್	ಸಹಾಯಕ ಕುಲಸಚಿವ	ಪರೀಕ್ಷಾ ವಿಭಾಗ	8073331535
52	ಶ್ರೀ ರಘು ಎಲ್.ಜೆ	ಸಹಾಯಕ ಕುಲಸಚಿವ	ಪ್ರವೇಶಾತಿ ವಿಭಾಗ	9611418726
53	ಶ್ರೀಮತಿ ಮಂಜುಳಾದೇವಿ	ಸಹಾಯಕ ಕುಲಸಚಿವೆ (ಸ್ವ/ಪ್ರ)	ಪರೀಕ್ಷಾ ವಿಭಾಗ	7406646153
54	ಶ್ರೀಮತಿ ಶುಭಾ ಎಂ	ಸಹಾಯಕ ಕುಲಸಚಿವೆ (ಸ್ವ/ಪ್ರ)	ಪರೀಕ್ಷಾ ವಿಭಾಗ	63690970593
55	ಶ್ರೀ ಜನಾರ್ಧನ ಸಿ	ಸಹಾಯಕ ಕುಲಸಚಿವ (ಸ್ವ/ಪ್ರ)	ಪರೀಕ್ಷಾ ವಿಭಾಗ	9901209621
56	ಶ್ರೀ ಪ್ರಸನ್ನ ಪಿ.ಎಸ್	ಸಹಾಯಕ ಕುಲಸಚಿವ (ಸ್ವ/ಪ್ರ)	ಪ್ರವೇಶಾತಿ ವಿಭಾಗ	9035395137
57	ಶ್ರೀ ಮುರಳಿಧರ	ಸಹಾಯಕ ಕುಲಸಚಿವ (ಸ್ವ/ಪ್ರ)	ಪ್ರವೇಶಾತಿ ವಿಭಾಗ	8123469017
58	ಶ್ರೀ ಗುರುದತ್ ಅರಸ್ ಕೆ	ಸಹಾಯಕ ಕುಲಸಚಿವ (ಸ್ವ/ಪ್ರ)	ಇಂಜಿನಿಯರಿಂಗ್ ವಿಭಾಗ	9886637143
59	ಶ್ರೀ ನಾರಾಯಣ ವಿ	ಸಹಾಯಕ ಕುಲಸಚಿವ (ಸ್ವ/ಪ್ರ)	ಇಂಜಿನಿಯರಿಂಗ್ ವಿಭಾಗ	99860615536
60	ಶ್ರೀ ಶಿವಕುಮಾರ್ ಆರ್	ಸಹಾಯಕ ಕುಲಸಚಿವ (ಸ್ವ/ಪ್ರ)	ಗ್ರಂಥಾಲಯ	9663084454
61	ಶ್ರೀಮತಿ ಕೋಮಲ ಎಂ.ಹೆಚ್	ಸಹಾಯಕ ಕುಲಸಚಿವೆ (ಸ್ವ/ಪ್ರ)	ಅಧ್ಯಯನ ಸಾಮಗ್ರಿ	9480034176
62	ಶ್ರೀ ಜಯರಾಜ್	ಸಹಾಯಕ ಕುಲಸಚಿವೆ (ಸ್ವ/ಪ್ರ)	ವಿದ್ಯಾರ್ಥಿ ವೇತನ ಘಟಕ	9113805113
63	ಶ್ರೀಮತಿ ಧನಲಕ್ಷ್ಮಿ	ಸಹಾಯಕ ಕುಲಸಚಿವೆ (ಸ್ವ/ಪ್ರ)	ಬೆಂಗಳೂರು ಪ್ರಾದೇಶಿಕ ಕೇಂದ್ರ-1	9980860299

64	ಶ್ರೀ ಮಂಜುನಾಥ ಬಿ	ಸಹಾಯಕ ಕುಲಸಚಿವ (ಸ್ವ/ಪ್ರ)	ಚಿತ್ರದುರ್ಗ ಪ್ರಾದೇಶಿಕ ಕೇಂದ್ರ	9916372818
65	ಶ್ರೀ ಮಂಜುನಾಥ	ಸಹಾಯಕ ಕುಲಸಚಿವ (ಸ್ವ/ಪ್ರ)	ಮಂಗಳೂರು ಪ್ರಾದೇಶಿಕ ಕೇಂದ್ರ	9902638643
66	ಡಾ. ವಿಜಯ್ ಕುಮಾರ್ ಅವರೆಕಾಡು	ಭಾಷಾಂತರಕಾರರು	ಸಂಯೋಜನಾಧಿಕಾರಿ, ಭಾಷಾಂತರ ಅಧ್ಯಯನ ವಿಭಾಗ	9845363573
67	ಡಾ. ಎ.ಎಸ್. ಮಹದೇವ	ಭಾಷಾಂತರಕಾರರು	ಸಂಯೋಜನಾಧಿಕಾರಿ,	990244879
68	ಶ್ರೀ ಸತ್ಯನಾರಯಣ ಗೌಡ	ಸಂಯೋಜನಾಧಿಕಾರಿ	ಸಂಯೋಜನಾಧಿಕಾರಿ – ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ	9448800816

5. ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

- ಆನ್–ಲೈನ್ ಅರ್ಜಿಯನ್ನು ಭರ್ತಿ ಮಾಡುವುದಕ್ಕೆ ಮೊದಲು ವಿದ್ಯಾರ್ಥಿಗಳು ವಿವರಣಾ ಪುಸ್ತಕದಲ್ಲಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಬೇಕು ಮತ್ತು ಯಾವುದೇ ತಪ್ಪುಗಳನ್ನು ಮಾಡಬಾರದು.
- ಅರ್ಹತಾ ಪರೀಕ್ಷೆಗಳ ಅಂಕಪಟ್ಟಿ/ ಸೇವಾ ಪ್ರಮಾಣ ಪತ್ರ/ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟಿರುವ ಪ್ರವರ್ಗ ಪ್ರಮಾಣಪತ್ರ (ಅಗತ್ಯವಿದ್ದಲ್ಲಿ)ಗಳ ಸ್ಕ್ಯಾನ್ ಮಾಡಿದ ದಾಖಲೆಗಳನ್ನು ಒದಗಿಸುವುದು.
- ವಿವರಣಾ ಪುಸ್ತಕದಲ್ಲಿ ತಿಳಿಸಿರುವಂತೆ ಆನ್–ಲೈನ್ ಪಾವತಿಯನ್ನು ಮಾಡಬೇಕು.
- ಈ ಕೆಳಕಂಡ ದಾಖಲಾತಿಗಳನ್ನು ಪ್ರವೇಶಾತಿ ಸಮಾಲೋಚನೆ ಸಮಯದಲ್ಲಿ ಸಲ್ಲಿಸಬೇಕು. (ಛಾಯಾಪ್ರತಿ)
    * ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
    * ದ್ವಿತೀಯ ಪಿ.ಯು.ಸಿ ಅಂಕ ಪಟ್ಟಿ
    * ಟಿ.ಸಿ.ಎಚ್, ಡಿ.ಎಡ್., ಬಿ.ಎಲ್.ಇ.ಡಿ./ಡಿ.ಎಲ್.ಇ.ಡಿ., ಅಂಕಪಟ್ಟಿ ಅಥವಾ ತತ್ಸಮಾನ ಅಂಕಪಟ್ಟಿ
    * ಪದವಿ ಅಂಕಪಟ್ಟಿಗಳು ಛಾಯಾ ಪ್ರತಿಗಳು.
    * ಎಸ್.ಸಿ./ಎಸ್.ಟಿ. ಜಾತಿ ದೃಢೀಕರಣ ಪತ್ರ. (ಅನ್ವಯವಾದರೆ ಮಾತ್ರ)
    * ಬಿ.ಪಿ.ಎಲ್ ಕಾರ್ಡ್ ಪ್ರತಿ (ಮಹಿಳಾ ಅಭ್ಯರ್ಥಿಗಳಿಗೆ)
    * ಆದಾಯ ದೃಢೀಕರಣ ಪತ್ರ. (ಅನ್ವಯವಾದರೆ ಮಾತ್ರ)
    * ಸೇವಾ ಪ್ರಮಾಣ ಪತ್ರ
    * ಆಧಾರ್ ಕಾರ್ಡ್
    * ಎರಡು ಸ್ಟ್ಯಾಂಪ್ ಅಳತೆಯ ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಅರ್ಜಿ ಪರಿಶೀಲನೆ ವೇಳೆ ಸಲ್ಲಿಸುವುದು.
- ದಾಖಲಾತಿ ಪರಿಶೀಲನೆಯನ್ನು ಕೇಂದ್ರ ಕಛೇರಿಯಲ್ಲಿ ನಡೆಸಲಾಗುವುದು. ದಾಖಲಾತಿ ಪರಿಶೀಲನೆಯ ವೇಳೆಯಲ್ಲಿ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.
- ವಿಶ್ವವಿದ್ಯಾನಿಲಯದ ಅನುಮೋದನೆ ನಂತರವೇ ಪ್ರವೇಶಾತಿಯು ಸಂಪೂರ್ಣಗೊಳ್ಳುತ್ತದೆ.
- ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು ಪದವಿಗೆ ಪ್ರವೇಶಾತಿ ಹೊಂದಿದರೆ ವಿಶ್ವವಿದ್ಯಾನಿಲಯವು, ವಿದ್ಯಾರ್ಥಿಯು ಎರಡನೇ ಬಾರಿ ಪಡೆದ ಪ್ರವೇಶಾತಿಯನ್ನು ರದ್ದುಪಡಿಸುತ್ತದೆ.
- ಪ್ರವೇಶಾತಿ ಬಯಸುವ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳು ಸಮಾಜಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಗೆ ಒಳಪಟ್ಟು, ಶುಲ್ಕ ರಿಯಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಅವರ ಕುಟುಂಬದ ವಾರ್ಷಿಕ ಆದಾಯವು ಸರ್ಕಾರವು ಕಾಲಕಾಲಕ್ಕೆ ನಿಗದಿ ಪಡಿಸಿದ ಮಿತಿಯಲ್ಲಿರಬೇಕು. (ನೋಡಿ ಅನುಬಂಧ–IV). ಸರ್ಕಾರವು ವಿದ್ಯಾರ್ಥಿಗಳ ಶುಲ್ಕವನ್ನು ಮರುಭರಿಕೆ ಮಾಡದಿದ್ದರೆ, ಸಂಬಂಧಪಟ್ಟ ವಿದ್ಯಾರ್ಥಿಗಳೇ ನಿಗದಿತ ಕಾಲಕ್ಕೆ ಶುಲ್ಕವನ್ನು ಭರಿಸಬೇಕಾಗುತ್ತದೆ. ತಪ್ಪಿದ್ದಲ್ಲಿ ಪರೀಕ್ಷೆಯನ್ನು ಬರೆಯಲು ಅನುಮತಿ ನೀಡುವುದಿಲ್ಲ.

- ಬಿ.ಪಿ.ಲ್. ಕುಟುಂಬಕ್ಕೆ ಸೇರಿದ ಮಹಿಳಾ ಅಭ್ಯರ್ಥಿಗಳು ಬೊಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಇದಕ್ಕಾಗಿ ಪ್ರವೇಶ ಸಮಯದಲ್ಲಿ ಸಮಕ್ಷಮ ಪ್ರಾಧಿಕಾರದಿಂದ ಪಡೆದಿರುವ ಬಿ.ಪಿ.ಎಲ್. ಕಾರ್ಡ್‌ನ್ನು ಹಾಜರುಪಡಿಸಬೇಕು.
- ಗುರುತಿನ ಚೀಟಿಯನ್ನು ವಿದ್ಯಾರ್ಥಿಗಳಿಗೆ ಪ್ರವೇಶವು ಅಂಗೀಕೃತವಾದ ನಂತರ ನೀಡಲಾಗುವುದು. ಗುರುತಿನ ಚೀಟಿಯನ್ನು ಶಿಕ್ಷಣ ಕ್ರಮ ಮುಗಿಯುವವರೆಗೂ ಹೊಂದಿರಬೇಕು. ವಿಶ್ವವಿದ್ಯಾನಿಲಯದೊಂದಿಗೆ ವ್ಯವಹರಿಸುವ ಎಲ್ಲಾ ಸಂದರ್ಭಗಳಲ್ಲಿಯೂ ವಿದ್ಯಾರ್ಥಿಯು ತನ್ನ ನೊಂದಣಿ ಸಂಖ್ಯೆ ಶಿಕ್ಷಣ ಕ್ರಮವನ್ನು ಬರೆಯಬೇಕು.
- ಅಭ್ಯರ್ಥಿಗಳು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸುವ ನಿಯಮ ನಿಬಂಧನೆಗಳನ್ನು ಪಾಲಿಸತಕ್ಕದ್ದು.
- ವಿದ್ಯಾರ್ಥಿಯು ತನ್ನ ವಯಸ್ಸು/ವಿದ್ಯಾರ್ಹತೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ನೀಡಿದರೆ ಅಥವಾ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷಣ ಕ್ರಮದಿಂದ ಹಾಗೂ ನೊಂದಣಿಯಿಂದ ಹೊರಗಿಡಲಾಗುವುದು, ಕಾನೂನು ಪ್ರಕಾರ ದಂಡ ವಿಧಿಸಲಾಗುವುದು ಹಾಗೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
- ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.
- ಎಲ್ಲಾ ನ್ಯಾಯ ವ್ಯಾಜ್ಯಗಳು ಮೈಸೂರು ನಗರ ನ್ಯಾಯಾಲಯಗಳ ವ್ಯಾಪ್ತಿಗೆ ಮಾತ್ರ ಬರುತ್ತವೆ.

6. ಶಿಕ್ಷಣಕ್ರಮ ಸಂರಚನೆ

6.1 ಬಿ.ಎಡ್. ಪದವಿ ಕಾರ್ಯಕ್ರಮ (NCTE ಪ್ರಕಾರ)

ಎ) ಕಾರ್ಯಕ್ರಮ ಅವಧಿ
ಅವಧಿ: ೨ ವರ್ಷಗಳು

ಪದವಿಯನ್ನು ಪೂರ್ಣಗೊಳಿಸಲು ಗರಿಷ್ಠ ಅವಧಿ:

ಕಾರ್ಯಕ್ರಮದ ಅವಧಿಯು ಎರಡು ಶೈಕ್ಷಣಿಕ ಅವಧಿಗಳು/ವರ್ಷಗಳು ಆಗಿದೆ. ಆದಾಗ್ಯೂ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಗರಿಷ್ಟ ಐದು ವರ್ಷಗಳ ಅವಧಿಯೊಳಗೆ ಪೂರ್ಣಗೊಳಿಸಲು ಅವಕಾಶ ನೀಡಲಾಗಿದೆ. (NCTE ಪ್ರಕಾರ).

ಶಿಕ್ಷಣ ಪದವಿ (ಬಿ.ಎಡ್.) ಕಾರ್ಯಕ್ರಮವು ವೃತ್ತಿಪರ ಕಾರ್ಯಕ್ರಮವಾಗಿದ್ದು, ಇದು ಉನ್ನತ ಪ್ರಾಥಮಿಕ (ತರಗತಿಗಳು VI-VIII) ಪ್ರೌಢ (IX, X) ಜೊತೆಗೆ ಹಿರಿಯ ಪ್ರೌಢ (XI, XII) ಹಂತಗಳ ಶಿಕ್ಷಕರನ್ನು ಸಿದ್ಧಗೊಳಿಸುತ್ತದೆ.

ಶಿಕ್ಷಣ ಪದವಿ ಕಾರ್ಯಕ್ರಮವು ಮುಕ್ತ ದೂರ ಕಲಿಕಾ ಕ್ರಮದಲ್ಲಿ ಸೇವಾನಿರತ ಶಿಕ್ಷಕರಿಗಾಗಿ ಇರುವ ವೃತ್ತಿಪರ ಕಾರ್ಯಕ್ರಮವಾಗಿದ್ದು, ಪ್ರಮುಖವಾಗಿ ಸೆಕೆಂಡರಿ ಶಿಕ್ಷಣದ ಔಪಚಾರಿಕ ತರಬೇತಿ ಪಡೆಯದೆ ಪ್ರಾಥಮಿಕ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವೃತ್ತಿ ಸಾಮರ್ಥ್ಯವನ್ನು ಉನ್ನತೀಕರಿಸುವ ಉದ್ದೇಶವನ್ನು ಹೊಂದಿದೆ. ಈ ಕಾರ್ಯಕ್ರಮವು ಅದರ ವಿನ್ಯಾಸ, ವಿಕಾಸ ಮತ್ತು ವಿತರಣೆಗೆ ಸಂಯೋಜಿತ ಕಲಿಕಾಕ್ರಮವನ್ನು ಬಳಸುತ್ತದೆ.

ಬಿ) ಅರ್ಜಿ ಸಲ್ಲಿಸಲು ಅರ್ಹತೆಗಳು

ಕೋಷ್ಟಕ–1

ಕೋರ್ಸ್	ಅವಧಿ/ ಪದ್ಧತಿ	ಅರ್ಹತೆ
ಬಿ.ಎಡ್.	2 ವರ್ಷ (ವಾರ್ಷಿಕ)	i. ಕನಿಷ್ಟ ಶೇ. 50% ಅಂಕಗಳೊಂದಿಗೆ ಪದವಿ ಮತ್ತು/ಅಥವಾ ವಿಜ್ಞಾನ/ಸಾಮಾಜಿಕ ವಿಜ್ಞಾನಗಳು/ಮಾನವಿಕ /ವಾಣಿಜ್ಯ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಅಭ್ಯರ್ಥಿಗಳು. ಇಂಜಿನಿಯರಿಂಗ್/ ತಂತ್ರಜ್ಞಾನದಲ್ಲಿ ಪದವಿ ಪಡೆದು ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಕನಿಷ್ಟ ಶೇ. 55% ರಷ್ಟು

		ಅಂಕಗಳೊಂದಿಗೆ ಪರಿಣಿತಿ ಪಡೆದಿರುವ ಅಥವಾ ಇನ್ಯಾವುದೇ ತತ್ಸಮಾನ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳು ii. ತರಬೇತಿ ಹೊಂದಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು. iii. ಮುಖಾಮುಖಿ ವಿಧಾನದ ಮೂಲಕ ಎನ್.ಸಿ.ಟಿ.ಇ. ಅಂಗೀಕೃತ ಶಿಕ್ಷಕ ಶಿಕ್ಷಣ ಕಾರ್ಯಕ್ರಮವನ್ನು ಕಡ್ಡಾಯವಾಗಿ ಪೂರ್ಣಗೊಳಿಸಿದವರು. (ಎನ್.ಸಿ.ಟಿ.ಇ. ಅಂಗೀಕೃತ ಶಿಕ್ಷಕ ಶಿಕ್ಷಣ ಕಾರ್ಯಕ್ರಮವೆಂದರೆ ಟಿ.ಸಿ.ಹೆಚ್/ಡಿ.ಇಡಿ./ಡಿ.ಇಎಲ್.ಇಡಿ./ ಬಿ.ಎಲ್.ಇಡಿ. ಅಥವಾ ತತ್ಸಮಾನ)

ಸೂಚನೆ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1/ವಿಕಲಚೇತನ(PWD)ಅಭ್ಯರ್ಥಿಗಳಿಗೆ(ಈ ಮೇಲೆ ತಿಳಿಸಲಾದ ಕನಿಷ್ಟ ಶೇಕಡವಾರು ಅರ್ಹತಾ ಅಂಕಗಳಲ್ಲಿ) ನಿಯಮಾನುಸಾರ ಶೇ. 5%ರಷ್ಟು ಅಂಕ ವಿನಾಯಿತಿ ಇರುತ್ತದೆ.

ಸಿ) **ಪ್ರವೇಶಾವಕಾಶ**

ಬಿ.ಎಡ್. ಪದವಿ ಕಾರ್ಯಕ್ರಮಕ್ಕೆ ಸದ್ಯದಲ್ಲಿ ಇರುವ ಪ್ರವೇಶಾವಕಾಶಗಳ ಸಂಖ್ಯೆ 500.(NCTE ಪ್ರಕಾರ)

ಡಿ) **ಬೋಧನಾ ಮಾಧ್ಯಮ**

ಬಿ.ಎಡ್.ಕಾರ್ಯಕ್ರಮವನ್ನು ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮಗಳಲ್ಲಿ ನೀಡಲಾಗುತ್ತದೆ.

6.2 ಸ್ಥಾನಗಳ ಹಂಚಿಕೆ

ವಿಶ್ವವಿದ್ಯಾನಿಲಯವು ಸರ್ಕಾರಿ ನಿಯಮಗಳಿಗನುಗುಣವಾಗಿ ಮೀಸಲಾತಿಯ ಆಧಾರದ ಮೇಲೆ ಸ್ಥಾನಗಳ ಹಂಚಿಕೆಯ ಕೋಷ್ಟಕವನ್ನು ಸಿದ್ಧಪಡಿಸುತ್ತದೆ.

ಬಿ.ಇಡಿ. ಸ್ಥಾನಗಳ ಹಂಚಿಕೆ 2025–26

ಕಲ್ಯಾಣ–ಕರ್ನಾಟಕೇತರ ಅಭ್ಯರ್ಥಿಗಳು

Sl. No.	Category	Percentage %	Total Seats Allotted	Seats allotted to				
				Merit	Special category	Kannada Medium	Women	Physically Challenged
					1%	5%	30%	3%
1.	GM	44%	204	125	2	10	61	6
2.	SC	17%	78	48	1	4	23	2
3.	ST	7%	32	19	0	2	10	1
4.	CAT-I	4%	18	11	0	1	5	1
5.	2A	15%	69	42	1	3	21	2
6.	2B	4%	18	11	0	1	5	1
7.	3A	4%	18	11	0	1	5	1
8.	3B	5%	23	14	0	1	7	1
	Total:		**460**	**281**	**4**	**23**	**137**	**15**

ಕಲ್ಯಾಣ–ಕರ್ನಾಟಕ ಅಭ್ಯರ್ಥಿಗಳು

Sl. No.	Category	Percentage %	Total Seats Allotted	Seats allotted to				
				Merit	Special category	Kannada Medium	Women	Physically Challenged
					1%	5%	30%	3%
1.	GM	44%	19	11	0	1	6	1
2.	SC	17%	7	5	0	0	2	0
3.	ST	7%	3	2	0	0	1	0
4.	CAT-I	4%	1	1	0	0	0	0
5.	2A	15%	6	4	0	0	2	0
6.	2B	4%	1	1	0	0	0	0
7.	3A	4%	1	1	0	0	0	0

8.	3B	5%	2	1	0	0	1	0
	Total:		**40**	**26**	**0**	**1**	**12**	**1**

ಸೂಚನೆ:1. ಮೀಸಲಾತಿ ನಿಯಮದಲ್ಲಿ ಬದಲಾವಣೆ ಆದಲ್ಲಿ ಸರ್ಕಾರದ ಆದೇಶದಂತೆ ಕ್ರಮವಹಿಸಲಾಗುವುದು.

2. ಬಿ.ಇಡಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಸಮಾನ ಅಂಕಗಳನ್ನು ಪಡೆದು, ಜನ್ಮ ದಿನಾಂಕವು ಒಂದೇ ಆಗಿ, ಪದವಿ ಪರೀಕ್ಷೆಗಳಲ್ಲಿ (ದರ್ಜೆ ಘೋಷಣೆಗೆ ಪರಿಗಣಿಸಿರುವ ಅಂಕಗಳು) ಪಡೆದಿರುವ ಅಂಕಗಳು ಒಂದೇ ಆಗಿರುವ ಪ್ರಕರಣಗಳಲ್ಲಿ ಅವರುಗಳು ಶಿಕ್ಷಕರಾಗಿ ಸೇವೆ ಸಲ್ಲಿಸಿರುವ ಅವಧಿಯ (ಸೇವಾ ಹಿರಿತನ) ಆಧಾರದ ಮೇಲೆ ರ್ಯಾಂಕನ್ನು ನಿರ್ಧರಿಸಲಾಗಿದೆ.

ಸ್ಪಷ್ಟೀಕರಣ

		ಶೇಕಡವಾರು ಮೀಸಲಾತಿ
I	**ಪ್ರವರ್ಗ– I**	**4**
II (ಎ)	**ಪ್ರವರ್ಗ– II (ಎ)**	**15**
II (ಬಿ)	**ಪ್ರವರ್ಗ– II (ಬಿ)**	**4**
III (ಎ)	**ಪ್ರವರ್ಗ– III (ಎ)**	**4**
III (ಬಿ)	**ಪ್ರವರ್ಗ– III (ಬಿ)**	**5**
ಪ.ಜಾ	**ಪರಿಶಿಷ್ಟ ಜಾತಿ**	**17**
ಪ.ಪಂ	**ಪರಿಶಿಷ್ಟ ಪಂಗಡ**	**7**
ಸಾ.ಅ	**ಸಾಮಾನ್ಯ ಅರ್ಹತೆ**	**44**
	ಒಟ್ಟು	**100**

* ಕರ್ನಾಟಕ ಸರ್ಕಾರದ ವಿಕಲಚೇತನರಿಗೆ ಸಂಬಂಧಪಟ್ಟ ಪರಿಷ್ಕೃತ ಅಧಿನಿಯಮ ಸಂಖ್ಯೆ: ಅಂ.ಆನ: ಕಲಂ:62;29; 2012–13 ದಿನಾಂಕ: 16.02.2013 ಅದಿನಿಯಮದಂತೆ ಈ ಗುಂಪಿಗೆ ಇರುವ ಶೇ. 3%ರಷ್ಟು ಸ್ಥಾನಗಳನ್ನು ಈಗ ಕಾಯ್ದಿರಿಸಿದ ಶೇ.3% ಸ್ಥಾನಗಳ ಮಿತಿಯೊಳಗೆ ಈ ಕೆಳಕಂಡಂತೆ ನಿಯಮಕ್ಕೆ ಅನುಗುಣವಾಗಿ ನೀಡಲಾಗುತ್ತದೆ.
    - ಶೇ. 1%ರಷ್ಟು ದೃಷ್ಟಿದೋಷ ಉಳ್ಳವರಿಗೆ
    - ಶೇ. 1%ರಷ್ಟು ಶ್ರವಣದೋಷ ಉಳ್ಳವರಿಗೆ
    - ಶೇ. 1%ರಷ್ಟು ದೈಹಿಕ ನ್ಯೂನತೆ ಉಳ್ಳವರಿಗೆ
* ದೈಹಿಕವಾಗಿ ಸವಾಲುಳ್ಳ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ, ಜಿಲ್ಲಾ ಸರ್ಜನ್‌ರಿಂದ ಪಡೆದ ಇತ್ತೀಚಿನ ಪ್ರಮಾಣ ಪತ್ರವನ್ನು ಲಗತ್ತಿಸಬೇಕು. ಪ್ರಮಾಣ ಪತ್ರದಲ್ಲಿ ದೋಷದ ಸ್ವರೂಪ ಮತ್ತು ಪ್ರತಿಶತ ನ್ಯೂನತೆ ಪ್ರಮಾಣವನ್ನು ಸ್ಪಷ್ಟವಾಗಿ ನಮೂದಿಸಬೇಕು. ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕಗಳನ್ನು ಪಡೆದಲ್ಲಿ ಆಯ್ಕೆ ಮಾಡುವಾಗ ಹೆಚ್ಚು ಪ್ರತಿಶತ ನ್ಯೂನತೆ ಇರುವ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು.
* ರಕ್ಷಣಾ ಮೀಸಲಾತಿ ವರ್ಗದಲ್ಲಿ ಅಭ್ಯರ್ಥಿಗಳನ್ನು ಈ ಕೆಳಕಂಡಂತೆ ಆಯ್ಕೆ ಮಾಡಲಾಗುವುದು. ರಕ್ಷಣಾ ಸೇವೆಯಲ್ಲಿರುವ ಸಿಬ್ಬಂದಿ/ಅವರ ಹೆಂಡತಿ ಅಥವಾ ಮಗ ಅಥವಾ ಅವಿವಾಹಿತ ಮಗಳಿಗೆ ಆದ್ಯತೆ ನೀಡಲಾಗುತ್ತದೆ. ಅಂತಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ನಿವೃತ್ತ ರಕ್ಷಣಾ ಸಿಬ್ಬಂದಿ/ಅವರ ಹೆಂಡತಿ/ಮಗ/ಅವಿವಾಹಿತ ಮಗಳಿಗೆ ಆದ್ಯತೆ ನೀಡಲಾಗುತ್ತದೆ.

* ಕಲ್ಯಾಣ–ಕರ್ನಾಟಕ ಪ್ರಾಂತ್ಯದ ಅಭ್ಯರ್ಥಿಗಳಿಗೆ ಪ್ರವೇಶಾತಿಯಲ್ಲಿ ಶೇ. 8%ರಷ್ಟು ಸ್ಥಾನಗಳ ಮೀಸಲಾತಿಯನ್ನು ಕಲ್ಪಿಸಿರುವ ಬಗ್ಗೆ ಕರ್ನಾಟಕ ಸರ್ಕಾರದ ಆದೇಶದ ಪತ್ರ ಸಂಖ್ಯೆ: ಇಡಿ–65 ಅಅವಿ/2013. ನವೆಂಬರ್ 2013ರ ಪ್ರಕಾರ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿರುವ ಆರು ಜಿಲ್ಲೆಗಳಿಂದ (ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ) ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿರುವವರು ಎಂಬುದನ್ನು ದೃಢಪಡಿಸುವ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ತರಬೇಕಾಗುತ್ತದೆ.
* ಎಸ್.ಸಿ/ಎಸ್.ಟಿ/ವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಉಳಿದ ವರ್ಗಗಳ ಅಡಿಯಲ್ಲಿ ಪ್ರವೇಶಾತಿ ಕೋರುವ ಅಭ್ಯರ್ಥಿಗಳು ಆದಾಯ ಮಿತಿ ಕುರಿತು ಕೆನೆ ಪದರ ವ್ಯಾಪ್ತಿಗೆ ಸಂಬಂಧಿಸಿದಂತೆ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಹೊರಡಿಸುವ ಆದೇಶದಲ್ಲಿ ತಿಳಿಸಿರುವ (ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಡಿ 225 ಬಿ.ಸಿ.ಎ 2000 ದಿನಾಂಕ: 30.03.2002) ಷರತ್ತಿಗೆ ಕಡ್ಡಾಯವಾಗಿ ಒಳಪಟ್ಟಿರಬೇಕು. ಸದರಿ ಆದೇಶದಲ್ಲಿ ಉಲ್ಲೇಖಿಸಿರುವ ಷರತ್ತುಗಳಿಗೆ ಒಳಪಡದ ಅಭ್ಯರ್ಥಿಗಳನ್ನು ಯಾವುದೇ ಕಾರಣ ನೀಡದೆ ಸಾಮಾನ್ಯ ವರ್ಗಕ್ಕೆ ವರ್ಗಾಯಿಸಲಾಗುವುದು.

ಟಿಪ್ಪಣಿ: ಮೇಲಿನ ವರ್ಗಗಳಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಆಯಾ ವರ್ಗಗಳ ಸೂಕ್ತ ಪ್ರಮಾಣಪತ್ರವನ್ನು ಪ್ರವೇಶಾತಿ ಸಂದರ್ಭದಲ್ಲಿ ಹಾಜರುಪಡಿಸಬೇಕು.

ಪ್ರತಿ ಅಭ್ಯರ್ಥಿಗೆ ಸಿ.ಇ.ಟಿ.ಯ ನೋಂದಣಿ/ ಸಂಸ್ಕರಣಾ ಶುಲ್ಕ ₹ 2200/–

7. ಆಯ್ಕೆಯ ನಿರ್ಣಾಯಕಗಳು

ಎ. ಮೀಸಲಾತಿ ಸ್ಥಾನಹಂಚಿಕೆ ವಿವರಗಳ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆಯುವ ಒಟ್ಟು ಅಂಕಗಳ ಆಧಾರದ ಮೇಲೆ ಪ್ರವೇಶಕ್ಕೆ ಆಯ್ಕೆ ಮಾಡಲಾಗುತ್ತದೆ.

ಬಿ. **ಸಾಮಾನ್ಯ ಪ್ರವೇಶ ಪರೀಕ್ಷೆ ವಿನ್ಯಾಸ.**

1. ಸಾಮಾನ್ಯ ಪ್ರವೇಶ ಪರೀಕ್ಷೆಗೆ ಎರಡು ಗಂಟೆ ಅವಧಿಯ ಒಂದು ಪತ್ರಿಕೆಯಿರುತ್ತದೆ.
2. ಈ ಪತ್ರಿಕೆಯು 100 ಬಹು ಆಯ್ಕೆ ಪರೀಕ್ಷಾಂಶಗಳನ್ನು ಹೊಂದಿದ್ದು, ಪ್ರತಿಯೊಂದಕ್ಕೂ ನಾಲ್ಕು ಪರ್ಯಾಯ ಉತ್ತರಗಳಿರುತ್ತವೆ.
3. ಸಾಮಾನ್ಯ ಪ್ರವೇಶ ಪರೀಕ್ಷೆಯು ಕೆಳಗಿನ ಎರಡು ವಿಭಾಗಗಳನ್ನು ಒಳಗೊಂಡಿದೆ.
   ಅ. ತಾರ್ಕಿಕ ಸಾಮರ್ಥ್ಯ
   ಆ. ಬೋಧನಾ ಅಭಿಸಾಮರ್ಥ್ಯ
4. ಪ್ರತಿಯೊಂದು ಸರಿಯಾದ ಉತ್ತರಕ್ಕೆ ಒಂದು ಅಂಕ.

ಪತ್ರಿಕೆಯ ಶೀರ್ಷಿಕೆ	ಪರೀಕ್ಷಾಂಶಗಳ ಸಂಖ್ಯೆ	ಗರಿಷ್ಠ ಅಂಕಗಳು	ಅವಧಿ
a) ತಾರ್ಕಿಕ ಸಾಮರ್ಥ್ಯ	50	50	**2 ಘಂಟೆಗಳು**
b) ಬೋಧನಾ ಅಭಿಸಾಮರ್ಥ್ಯ	50	50	
ಒಟ್ಟು	**100**	**100**	

ಸಿ. ಸಾಮಾನ್ಯ ಪ್ರವೇಶ ಪರೀಕ್ಷೆ ದಿನಾಂಕ ಮತ್ತು ಸಮಯ

ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು **ದಿನಾಂಕ: 28–09–2025ರ ಭಾನುವಾರ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆ**ಯವರೆಗೆ ನಡೆಸಲಾಗುವುದು.

ಡಿ. ಸಾಮಾನ್ಯ ಪ್ರವೇಶ ಪರೀಕ್ಷಾ ಕೇಂದ್ರಗಳ ಕೋಡ್ ಸಂಖ್ಯೆಗಳು

1. ಮೈಸೂರು : 01
2. ಬೆಂಗಳೂರು : 02
3. ತುಮಕೂರು : 03
4. ಶಿವಮೊಗ್ಗ : 04
5. ಬಳ್ಳಾರಿ : 05
6. ಗುಲ್ಬರ್ಗ : 06
7. ಧಾರವಾಡ : 07
8. ಉಡುಪಿ : 08
9. ಮಂಗಳೂರು : 09
10. ಹಾಸನ : 10
11. ದಾವಣಗೆರೆ : 11
12. ಕಾರವಾರ : 12
13. ಕೋಲಾರ : 13
14. ವಿಜಯಪುರ : 14

50 ಅಭ್ಯರ್ಥಿಗಳಿಗಿಂತ ಕಡಿಮೆ ಇದ್ದರೆ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು

ಸೂಚನೆ:

1. ವಿದ್ಯಾರ್ಥಿಯು CET ಗೆ ಅವನು/ಅವಳು ಅರ್ಜಿಯಲ್ಲಿ ಆಯ್ಕೆ ಮಾಡಿದ ಕೇಂದ್ರಕ್ಕೆ ಹಾಜರಾಗಬೇಕು.
2. CET ಗೆ ಪ್ರವೇಶಾತಿ ಪತ್ರಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆಯ ನಂತರ ಪಡೆದುಕೊಳ್ಳಬಹುದು.

ಇ. OMR:

CET ಸಂದರ್ಭದಲ್ಲಿ ವಿದ್ಯಾರ್ಥಿಗಳು OMR ಹಾಳೆಯನ್ನು ಬಹು ಎಚ್ಚರಿಕೆಯಿಂದ ತುಂಬಬೇಕು. OMR ಹಾಳೆಗಳನ್ನು ವಿಶ್ವವಿದ್ಯಾನಿಲಯವೇ ಒದಗಿಸುತ್ತದೆ. (ಅಪೆಂಡಿಕ್ಸ್ ನೋಡಿ)

7.1 ಬಿ.ಎಡ್. ಪ್ರವೇಶಾತಿಗೆ ಆಯ್ಕೆಯ ಕ್ರಮ

* ಅಭ್ಯರ್ಥಿಯು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಕರಾಮುವಿಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು.
* ಆಯ್ಕೆ ಸಮಿತಿ ಅಭ್ಯರ್ಥಿಗಳ ಪಟ್ಟಿಯನ್ನು ಅವರು ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಮೀಸಲಾತಿಗೆ ಸಂಬಂಧಿಸಿದ ನಿಯಮಗಳಿಗನುಗುಣವಾಗಿ ಸಿದ್ಧಪಡಿಸುತ್ತದೆ (ಸೀಟ್ ಮ್ಯಾಟ್ರಿಕ್ಸ್ ಅನುಗುಣವಾಗಿ).
* ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಸಮಾನ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಜನ್ಮ ದಿನಾಂಕದ ಹಿರಿತನದ ಆಧಾರದ ಮೇಲೆ ಅರ್ಹತಾ ಪಟ್ಟಿಯಲ್ಲಿ ನಮೂದಿಸಲಾಗುವುದು.

* ಆಯ್ಕೆಯಾದ ಅಭ್ಯರ್ಥಿಗಳಿಗೆ ಕರಾಮುವಿಯ ವೆಬ್‌ಸೈಟ್ ಮೂಲಕ ತಿಳಿಸಲಾಗುತ್ತದೆ. ಹಾಗಾಗಿ ಅಂತಹ ಅಭ್ಯರ್ಥಿಗಳು CET ನಂತರ ಜಾಗೃತರಾಗಿರಬೇಕು.
* ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರವೇಶಾತಿ ಸಮಾಲೋಚನೆಗೆ ಭಾಗವಹಿಸಲು ತಿಳಿಸಲಾಗುತ್ತದೆ ಮತ್ತು ಅವರ ದಾಖಲೆಗಳನ್ನು ಅರ್ಹತಾ ಮಾನದಂಡ/ಮೀಸಲಾತಿ ನಿಯಮಗಳಿಗನುಗುಣವಾಗಿ ಪರಿಶೀಲಿಸಲಾಗುತ್ತದೆ.
* ಆಯ್ಕೆಯಾದ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಆನ್‌ಲೈನ್ ಕ್ರಮದ ಮೂಲಕ ಪಾವತಿಸಬೇಕು.
* ಆಯ್ಕೆಯಾದ ಎಲ್ಲ ಅಭ್ಯರ್ಥಿಗಳು ಪ್ರವೇಶಾತಿ ಸಮಾಲೋಚನೆಯ ಮೊದಲ ದಿನವೇ ವರದಿ ಮಾಡಿಕೊಳ್ಳಬೇಕು, ಇಲ್ಲದಿದ್ದಲ್ಲಿ ಅಂಥ ಅಭ್ಯರ್ಥಿಗಳು ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುತ್ತಾರೆ. ಇಂಥ ಖಾಲಿ ಉಳಿದ ಸ್ಥಾನಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮ ವಹಿಸುತ್ತದೆ.
* ಯಶಸ್ವಿಯಾಗಿ ಪ್ರವೇಶ ಪ್ರಕ್ರಿಯೆಯನ್ನು ಮುಗಿಸಿದ ಅಭ್ಯರ್ಥಿಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳಿಗನುಗುಣವಾಗಿ ಕಲಿಕಾರ್ಥಿ ಬೆಂಬಲಿತ ಕೇಂದ್ರಗಳಿಗೆ ಹಂಚಿಕೆ ಮಾಡಲಾಗುತ್ತದೆ.
* ಎಲ್ಲಾ ಆಯ್ಕೆಗಳನ್ನು ವಿಶ್ವವಿದ್ಯಾನಿಲಯದಿಂದ ರಚಿತವಾದ ಆಯ್ಕೆ ಸಮಿತಿಯು ಮಾಡುತ್ತದೆ.
* ಅಭ್ಯರ್ಥಿಗಳ ಆಯ್ಕೆಯು ವಿಶ್ವವಿದ್ಯಾನಿಲಯದಿಂದ ರಚಿತವಾದ ಆಯ್ಕೆ ಸಮಿತಿಯ ನಿರ್ಣಯದಿಂದ ಆಗಿರುತ್ತದೆ.

ಸೂಚನೆ:

* ಆಯ್ಕೆಯಾದ ಅಭ್ಯರ್ಥಿಗಳು ಕಲಿಕಾರ್ಥಿ ಬೆಂಬಲಿತ ಕೇಂದ್ರಕ್ಕೆ ತೆರಳಿ ನಿಗದಿತ ಅವಧಿಯೊಳಗೆ ಸಂಯೋಜನಾಧಿಕಾರಿಯವರಿಗೆ ವರದಿ ಮಾಡಿಕೊಳ್ಳುವುದು. ತಪ್ಪಿದ್ದಲ್ಲಿ ಸೀಟು ರದ್ದು ಪಡಿಸಲಾಗುವುದು. ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
* ಯಾವುದೇ ಮೀಸಲಾತಿ ಪ್ರವರ್ಗದಲ್ಲಿ ಅವಶ್ಯವಿರುವ ಸಂಖ್ಯೆಯ ಅಭ್ಯರ್ಥಿಗಳು ಇಲ್ಲದಿದ್ದ ಪಕ್ಷದಲ್ಲಿ ಉಳಿದಿರುವ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಹಿಸಲಾಗುವುದು.
* ಎಲ್ಲಾ ಉಳಿದ ವಿಷಯಗಳಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮ.

7.2 ಪ್ರವೇಶ ಸಮಾಲೋಚನೆ ಸಂದರ್ಭದಲ್ಲಿ

* ಪ್ರವೇಶ ಸಮಾಲೋಚನೆಯನ್ನು ಪ್ರವೇಶಾತಿ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ಮಾತ್ರ ನಡೆಸಲಾಗುತ್ತದೆ.
* ಮೂಲ ಪ್ರತಿಗಳನ್ನು ಪರಿಶೀಲಿಸಲಾಗುತ್ತದೆ (ಪರಿಶೀಲಿಸಲು ಬೇಕಾದ ಮೂಲ ಪ್ರತಿಗಳನ್ನು ಒದಗಿಸದಿದ್ದಲ್ಲಿ ಪ್ರವೇಶವನ್ನು ರದ್ದುಗೊಳಿಸಲಾಗುವುದು.)
* ಅಧ್ಯಯನ ಕೇಂದ್ರಗಳ ಹಂಚಿಕೆಯನ್ನು ಅರ್ಹತಾ ಪಟ್ಟಿಯ ಆಧಾರ ಮತ್ತು ಮೀಸಲಾತಿಯ ನಿಯಮಗಳಿಗನುಗುಣವಾಗಿ ಮಾಡಲಾಗುವುದು.
* ಪ್ರವೇಶ ಸಮಾಲೋಚನೆಯ ಸಮಯದಲ್ಲಿ ಅಧ್ಯಯನ ಕೇಂದ್ರಗಳನ್ನು ಪ್ರಕಟಿಸಲಾಗುತ್ತದೆ. ಒಮ್ಮೆ ಹಂಚಿಕೆಯಾದ ಅಧ್ಯಯನ ಕೇಂದ್ರವನ್ನು ಕಾರ್ಯಕ್ರಮದ ಮಧ್ಯದಲ್ಲಿ ಬದಲಾಯಿಸಲಾಗುವುದಿಲ್ಲ.

8. ಶುಲ್ಕ ವಿನ್ಯಾಸ – ಬಿ.ಎಡ್. ಶಿಕ್ಷಣಕ್ರಮ

ವಿವರಗಳು	ಪ್ರಥಮ ವರ್ಷ	ದ್ವಿತೀಯ ವರ್ಷ
ನೋಂದಣಿ ಶುಲ್ಕ	880/–	–
ಬೋಧನಾ ಶುಲ್ಕ	34,650/–	37,510/–
ಕೌಶಲ್ಯ ಅಭಿವೃದ್ಧಿ ಶುಲ್ಕ	715/–	715/–
ಗ್ರಂಥಾಲಯ ಶುಲ್ಕ	275/–	275/–

ಅಲ್ಯುಮಿನಿ ಶುಲ್ಕ	550/–	
ಒಟ್ಟು	**39,270/–**	**38,500/–**

ಸೂಚನೆ:

- ಕರ್ನಾಟಕ ರಾಜ್ಯದ ಹೊರಗಿನ ವಿಶ್ವವಿದ್ಯಾನಿಲಯಗಳಿಂದ ಪದವಿ ಹೊಂದಿರುವ ವಿದ್ಯಾರ್ಥಿಗಳು ಮಾತ್ರ ಅರ್ಹತಾ ಶುಲ್ಕವನ್ನು ಪಾವತಿಸಬೇಕು.
- ಕನಿಷ್ಠ 5 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಟಿಬೇಟಿಯನ್ನರು ಪ್ರವೇಶಾತಿ ಶುಲ್ಕದೊಂದಿಗೆ, ವಿಶೇಷ ಶುಲ್ಕವಾಗಿ 2200/– ಅನ್ನು ಪಾವತಿಸಬೇಕು.
- ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿಸುವುದಿಲ್ಲ.

8.1 **ಬೋಧನಾ ಸಾಮಗ್ರಿಗಳು ಮತ್ತು ಗುರುತಿನ ಚೀಟಿ**

ಪ್ರವೇಶಾತಿ ಮುಗಿದ ನಂತರ ಬೋಧನಾ ಸಾಮಗ್ರಿಗಳು ಮತ್ತು ಗುರುತಿನ ಚೀಟಿಯನ್ನು ನೀಡಲಾಗುವುದು.

8.2 ಇತರೆ ಶುಲ್ಕಗಳ ವಿವರ

1.	ಹೆಸರು ಬದಲಾವಣೆ ಶುಲ್ಕ	1,100/–
2.	ಅಧ್ಯಯನ ಸಾಮಗ್ರಿಗಳ ದ್ವಿಪ್ರತಿ ಬೆಲೆ (ಪ್ರತಿ ಬ್ಲಾಕ್‌ಗೆ)	100/–
	ಅಧ್ಯಯನ ಸಾಮಗ್ರಿಗಳ ದ್ವಿಪ್ರತಿ ಬೆಲೆ (ಪ್ರತಿ ಬ್ಲಾಕ್‌ಗೆ) ಇತರೆ ವಿಷಯಕ್ಕೆ	200/–
3.	ಬೇಬಾಕಿ ಪತ್ರ / ವರ್ಗಾವಣೆ ಪ್ರಮಾಣ ಪತ್ರಗಳಿಗೆ ಶುಲ್ಕ	550/–
4.	ವ್ಯಾಸಂಗ ಪ್ರಮಾಣ ಪತ್ರ ಶುಲ್ಕ	550/–
5.	ಬೋಧನಾ ಮಾಧ್ಯಮ/ ವಿಷಯ ಬದಲಾವಣೆಗೆ ಶುಲ್ಕ	1100/–
6.	ನಕಲು ಗುರುತಿನ ಪತ್ರಕ್ಕೆ ಶುಲ್ಕ	330/–

ಮೇಲೆ ಹೇಳಿದ ಶುಲ್ಕ ವಿನ್ಯಾಸ ತಾತ್ಕಾಲಿಕವಾದದ್ದು. ವಿಶ್ವವಿದ್ಯಾನಿಲಯಕ್ಕೆ ಅದನ್ನು ಬದಲಿಸುವ ಹಕ್ಕಿದೆ. ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳು ಅದಕ್ಕಾಗಿ ನೀಡಿದ ಆನ್‌ಲೈನ್ ಮೂಲಕ ಪಾವತಿಸಬೇಕು.

9. ಅಧ್ಯಯನದ ಕೋರ್ಸ್‌ಗಳು

ಪ್ರಥಮ ವರ್ಷ		
ಕ್ರ. ಸಂ	**ಕೋರ್ಸ್ ಕೋಡ್**	**ಕೋರ್ಸ್‌ನ ಶೀರ್ಷಿಕೆ**
1.	ಬಿ.ಎಡ್. ಸಿ.ಸಿ.–01	ಬಾಲ್ಯಾವಸ್ಥೆ ಮತ್ತು ತಾರುಣ್ಯಾವಸ್ಥೆ
2	ಬಿ.ಎಡ್. ಸಿ.ಸಿ.–02	ಸಮಕಾಲೀನ ಭಾರತ ಮತ್ತು ಶಿಕ್ಷಣ
3	ಬಿ.ಎಡ್. ಸಿ.ಸಿ.–03	ಕಲಿಕೆ ಮತ್ತು ಬೋಧನೆಯ ತತ್ವಗಳು
4	ಬಿ.ಎಡ್. ಸಿ.ಸಿ.–04	ಪಠ್ಯಕ್ರಮದಾದ್ಯಂತ ಭಾಷೆ
5	ಬಿ.ಎಡ್. ಸಿ.ಸಿ.–05	ಶಾಸ್ತ್ರೀಯ ಕ್ರಮ ಮತ್ತು ವಿಷಯಗಳನ್ನು ಅರ್ಥೈಸಿಕೊಳ್ಳುವುದು
6	ಬಿ.ಎಡ್. ಸಿ.ಸಿ.–06	ಲಿಂಗ, ಶಾಲೆ ಮತ್ತು ಸಮಾಜ
7	ಬಿ.ಎಡ್. ಸಿ.ಸಿ.–09	ಜ್ಞಾನ ಮತ್ತು ಪಠ್ಯಕ್ರಮ
8	ಬಿ.ಎಡ್. ಸಿ.ಸಿ.–10	ಕಲಿಕೆಗಾಗಿ ಮೌಲ್ಯಮಾಪನ
9	ಬಿ.ಎಡ್. ಸಿ.ಸಿ.–11	ಸಮನ್ವಯ ಶಿಕ್ಷಣ
10	E.F.-1	Micro teaching and Integration
11	E.F.-2	Psycho Social Tools and Techniques
12	E.F.-3	Simulated Lessons

	ಬಿ.ಎಡ್. ಇ.ಪಿ.ಸಿ.–01	ಪಠ್ಯ ಓದುವುದು ಮತ್ತು ಪ್ರತಿಫಲಿಸುವುದು
	ಬಿ.ಎಡ್. ಇ.ಪಿ.ಸಿ.–03	ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವಿಮರ್ಶಾತ್ಮಕ ಅರ್ಥೈಸುವಿಕೆ
	ದ್ವಿತೀಯ ವರ್ಷ	
1	ಬಿ.ಎಡ್. POSS-07/08	ಶಾಲಾ ವಿಷಯ ಬೋಧನಾಶಾಸ್ತ್ರ–1
2	ಬಿ.ಎಡ್. POSS-07/08	ಶಾಲಾ ವಿಷಯ ಬೋಧನಾಶಾಸ್ತ್ರ–2
3	ಬಿ.ಎಡ್. ಸಿ.ಸಿ.–12	ಮುಕ್ತ ಮತ್ತು ದೂರ ಕಲಿಕೆ
4	ಬಿ.ಎಡ್. ಓ.ಸಿ.–12(ಎ) ಅಥವಾ ಬಿ.ಎಡ್. ಓ.ಸಿ.–12(ಬಿ)	ಮಾರ್ಗದರ್ಶನ ಮತ್ತು ಉಪಬೋಧೆ ಅಥವಾ ಪರಿಸರ ಶಿಕ್ಷಣ
5	ಬಿ.ಎಡ್. ಇ.ಪಿ.ಸಿ.–02	ಶಿಕ್ಷಣದಲ್ಲಿ ನಾಟಕ ಮತ್ತು ಕಲೆ
6	ಬಿ.ಎಡ್. ಇ.ಪಿ.ಸಿ.–04	ಸ್ವಯಂನ್ನು ಅರ್ಥೈಸಿಕೊಳ್ಳುವುದು
7	E.F-4	Action Research Project
8	ಇಂಟರ್ನ್‌ಶಿಪ್ POSS-I	ಪ್ರಾಕ್ಟಿಕಮ್– I
9	ಇಂಟರ್ನ್‌ಶಿಪ್ POSS-II	ಪ್ರಾಕ್ಟಿಕಮ್– II
10	ಪ್ರಾಯೋಗಿಕ ಪರೀಕ್ಷೆ– I	
11	ಪ್ರಾಯೋಗಿಕ ಪರೀಕ್ಷೆ– II	

ಸೂಚನೆ: ವಿದ್ಯಾರ್ಥಿಯು ಪದವಿ ಮಟ್ಟದಲ್ಲಿ ಅಧ್ಯಯನ ಮಾಡಿದ ವಿಷಯಗಳಿಗನುಗುಣವಾಗಿ ಕೆಳಗಿನ ಯಾವುದಾದರೂ ಎರಡು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಎರಡು ಭಾಷೆಗಳನ್ನು ಬೋಧನಾ ಶಾಸ್ತ್ರಗಳನ್ನಾಗಿ ಆಯ್ಕೆ ಮಾಡಿಕೊಳ್ಳುವಂತಿಲ್ಲ.

a) ಸಮಾಜ ವಿಜ್ಞಾನ ಬೋಧನಾಶಾಸ್ತ್ರ
b) ಜೀವ ವಿಜ್ಞಾನ ಬೋಧನಾಶಾಸ್ತ್ರ
c) ಭೌತ ವಿಜ್ಞಾನ ಬೋಧನಾಶಾಸ್ತ್ರ
d) ಗಣಿತ ಬೋಧನಾಶಾಸ್ತ್ರ
e) ಕನ್ನಡ ಬೋಧನಾಶಾಸ್ತ್ರ
f) ಇಂಗ್ಲೀಷ್ ಬೋಧನಾಶಾಸ್ತ್ರ
g) ಹಿಂದಿ ಬೋಧನಾಶಾಸ್ತ್ರ
h) ಸಂಸ್ಕೃತ ಬೋಧನಾಶಾಸ್ತ್ರ

10. ಬೋಧನಾ ವ್ಯವಸ್ಥೆ

ಈ ವಿಶ್ವವಿದ್ಯಾನಿಲಯದಲ್ಲಿ ಬಳಸುವ ಬೋಧನಾ ವಿಧಾನಶಾಸ್ತ್ರವು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಇರುವುದಕ್ಕಿಂತ ಭಿನ್ನವಾಗಿದೆ. ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥೆಯು ಹೆಚ್ಚು ಕಲಿಕಾರ್ಥಿ ಪ್ರಧಾನವಾಗಿದೆ ಮತ್ತು ವಿದ್ಯಾರ್ಥಿಯು ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾನೆ/ ಳೆ ಎಂಬ ಭಾವನೆಯೊಂದಿಗೆ ಪ್ರೇರಿತ ವಿದ್ಯಾರ್ಥಿಯ ಅಗತ್ಯಗಳನ್ನು ಪೂರೈಸುವುದಕ್ಕೆ ಸಜ್ಜಾಗುತ್ತದೆ. ವಿಶ್ವವಿದ್ಯಾನಿಲಯವು ಬೋಧನೆಗಾಗಿ ಬಹುವಾಹಿನಿ ಮಾರ್ಗೋಪಾಯವನ್ನು ಅನುಸರಿಸುತ್ತದೆ. ವಿದ್ಯಾರ್ಥಿಗೆ ಬೋಧನೆಯನ್ನು ವಿವಿಧ ವಿಧಾನಗಳ ಮುದ್ರಿತ, ಶ್ರವಣ ಮತ್ತು ಮುಖಾಮುಖಿ ಸಮಾಲೋಚನೆ, ಮೂಲಕ ವಿತರಣೆ ಮಾಡುವುದು. ಬಿ.ಎಡ್. ಕಾರ್ಯಕ್ರಮವು ವೈಯಕ್ತಿಕ ಸಂಪರ್ಕ ಕಾರ್ಯಕ್ರಮ ಮತ್ತು ಸಮಾಲೋಚನೆ ಇವೆರಡನ್ನು ಸಮ್ಮಿಶ್ರಣ ಮಾಡಿರುವುದಾಗಿದೆ. ಬೋಧನಾ ಸಿದ್ಧಾಂತ ಮತ್ತು ಅಭ್ಯಾಸಗಳನ್ನು **KSOU** ಕೇಂದ್ರ ಸ್ಥಳ/ಗುರುತಿಸಿದ ವಿದ್ಯಾರ್ಥಿ ಬೆಂಬಲಿತ ಕೇಂದ್ರಗಳಲ್ಲಿ **NCTE/UGC** ನಿರ್ದಿಷ್ಟತೆಗಳ ಪ್ರಕಾರ ವ್ಯವಸ್ಥೆ ಮಾಡಲಾಗುವುದು.

- **ಸ್ವಯಂಕಲಿಕಾ ಸಾಮಗ್ರಿಗಳು** (SLM): ಹೆಚ್ಚಿನ ಅನುಭವ ಇರುವ ಶೈಕ್ಷಣಿಕ ತಜ್ಞರುಗಳಿಂದ ರಚಿತವಾದ ಅಧ್ಯಯನ ಸಾಮಗ್ರಿಗಳು ಬೋಧನಾ ವ್ಯವಸ್ಥೆಯ ಭಾಗವಾಗಿದೆ. ಅಧ್ಯಯನ ಸಾಮಗ್ರಿಗಳು ಕಲಿಕಾರ್ಥಿ ಸಹಾಯ ಕೇಂದ್ರವಾಗಿದ್ದು ನಿದರ್ಶನಗಳು, ವ್ಯಕ್ತಿವೃತ್ತಾಂತ(ಕೇಸ್)ಗಳು, ಅನುಭವಗಳು ಇತ್ಯಾದಿಗಳನ್ನು ಒಳಗೊಂಡಿದ್ದು, ಜ್ಞಾನ ಮತ್ತು ಕೌಶಲಗಳನ್ನು ಗಳಿಸಿಕೊಳ್ಳಲು ಸಹಾಯಕವಾಗಿದೆ.
- **ವೈಯಕ್ತಿಕ ಸಂಪರ್ಕ ಕಾರ್ಯಕ್ರಮ** (PCP): ವಿಶ್ವವಿದ್ಯಾನಿಲಯವು ವೈಯಕ್ತಿಕ ಸಂಪರ್ಕ ಕಾರ್ಯಕ್ರಮವನ್ನು ಕಲಿಕಾರ್ಥಿ ಬೆಂಬಲಿತ ಕೇಂದ್ರಗಳಲ್ಲಿ ವ್ಯವಸ್ಥೆಗೊಳಿಸುತ್ತದೆ. ಗುಣಾತ್ಮಕ ಸೇವೆಗಳನ್ನು ಒದಗಿಸಲು ಸಮರ್ಪಿತ ಅಧ್ಯಾಪಕರುಗಳನ್ನು ಕಾರ್ಯೋನ್ಮುಖಗೊಳಿಸಲಾಗುವುದು.
- **ಸಮಾಲೋಚನೆ:** ವಿಶ್ವವಿದ್ಯಾನಿಲಯವು ಮುಖಾಮುಖಿ ಮತ್ತು ರೇಡಿಯೋ, ದೂರವಾಣಿ, ಕಾರ್ಯತಃ (virtual) ಗಳಂತಹ ವಿದ್ಯುನ್ಮಾದ ಸಮಾಲೋಚನೆಗಳನ್ನು ಸಹ ವ್ಯವಸ್ಥೆಗೊಳಿಸುತ್ತದೆ. ವೈಯಕ್ತಿಕ ಸಂಪರ್ಕ ಕಾರ್ಯಕ್ರಮ ಮತ್ತು ಸಮಾಲೋಚನೆಗೆ ಸಂಬಂಧಿಸಿದ ವಿವರಣೆಗಳನ್ನು ಸೂಕ್ತ ಸಮಯದಲ್ಲಿ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು.

  a) **ಸಂಪರ್ಕ ಕಾರ್ಯಕ್ರಮ:** ವೈಯಕ್ತಿಕ ಸಂಪರ್ಕ ಕಾರ್ಯಕ್ರಮವು ಸಮಾಲೋಚನಾ ಸತ್ರಗಳು, ಕಾರ್ಯಗಾರಗಳು, ವಿಚಾರಸಂಕಿರಣಗಳಲ್ಲಿ ಪ್ರಸ್ತುತಪಡಿಸುವುದು, ಬೋಧನಾ ಅಭ್ಯಾಸಕ್ಕಾಗಿ ಸಿದ್ಧತೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಸಮಾಲೋಚನೆ ಮತ್ತು ಇತರ ಚಟುವಟಿಕೆಗಳನ್ನು ಕಲಿಕಾರ್ಥಿಗಳಿಗೆ ಅನುಕೂಲವಾಗುವ ಕಲಿಕಾರ್ಥಿ ಬೆಂಬಲಿತ ಕೇಂದ್ರಗಳಲ್ಲಿ ನಡೆಸಲಾಗುವುದು.

  b) **ಶೈಕ್ಷಣಿಕ ಸಮಾಲೋಚನೆ:** ಶೈಕ್ಷಣಿಕ ಸಮಾಲೋಚನಾ ಸತ್ರಗಳು ಬಿ.ಎಡ್. ಕಾರ್ಯಕ್ರಮ ಅವಧಿಯುದ್ದಕ್ಕೂ ಹರವುಗೊಂಡಿರುತ್ತದೆ. ಸಮಾಲೋಚನಾ ಸತ್ರಗಳಲ್ಲಿ ಶೈಕ್ಷಣಿಕ ಮತ್ತು ವಿದ್ಯಾರ್ಥಿಗಳ ಶಿಕ್ಷಣ ಸಂಬಂಧ ವ್ಯಕ್ತಿಗತ ಸಮಸ್ಯೆಗಳನ್ನು ಚರ್ಚಿಸಲಾಗುತ್ತದೆ. ಈ ಸಮಾಲೋಚನಾ ಸತ್ರಗಳನ್ನು ಕಲಿಕೆಯ ಸಂಬಂಧ ಅಂಶಗಳಾದ ವಿಷಯವಸ್ತುವಿನ ಕ್ಲಿಷ್ಟತೆಯ ಅಂಶಗಳು, ಕ್ಷೇತ್ರಕಾರ್ಯ, ಅಭ್ಯಾಸಬೋಧನೆ, ಯೋಜಿತ ಕಾರ್ಯ, ನಿಯೋಜಿತ ಕಾರ್ಯಗಳು, ಕಿರು ಸಂಶೋಧನಾ ವರದಿಗಳು, ಹಾಗೆಯೇ ಸಮಯ ನಿರ್ವಹಣೆ, ಅಧ್ಯಯನ ಕೌಶಲಗಳು ಇತ್ಯಾದಿಗಳಿಗೆ ವ್ಯಕ್ತಿಗತ ಮಾರ್ಗದರ್ಶನವನ್ನು ಒದಗಿಸಲು ಬಳಸಲಾಗುತ್ತದೆ. ಎರಡೂ ವರ್ಷಗಳಲ್ಲಿ ಹರಡಿಕೊಳ್ಳುವ ಕನಿಷ್ಟ 144 ಅಧ್ಯಯನ ಗಂಟೆಗಳನ್ನು ಸಮಾಲೋಚನಾ ಸತ್ರಗಳಿಗಾಗಿ ಮೀಸಲಿರಿಸಲಾಗಿದೆ. ಶೈಕ್ಷಣಿಕ ಸಮಾಲೋಚನೆಯ ವಿವರಗಳನ್ನು ಶೈಕ್ಷಣಿಕ ಕಾರ್ಯಕ್ರಮದ ಕ್ಯಾಲೆಂಡರ್‌ನಲ್ಲಿ ನೀಡಲಾಗಿದೆ (ಪುಟ ಸಂಖ್ಯೆ 11 ಅನ್ನು ನೋಡಿ). ವಿದ್ಯಾರ್ಥಿಗಳಿಗೆ ನೀಡಲ್ಪಡುವ ಕಲಿಕಾ ಸಾಮಗ್ರಿಗಳು ಬೋಧನಾ ಕಾರ್ಯವನ್ನು ನಿರ್ವಹಿಸುವುದರಿಂದ ಸಮಾಲೋಚನಾ ಸತ್ರಗಳು ಟ್ಯುಟೋರಿಯಲ್ ರೂಪದಲ್ಲಿ ಇರುತ್ತವೆಯೇ ವಿನ: ಬೋಧನಾ ಸತ್ರಗಳಾಗಿ ಅಲ್ಲ.

  c) **ಕಾರ್ಯಗಾರಗಳು:** ಕಾರ್ಯಗಾರಗಳಲ್ಲಿ ಕಲಿಕಾರ್ಥಿಗಳು ಶಿಕ್ಷಕರಿಗೆ ಅಗತ್ಯವಿರುವ ಸಾಮರ್ಥ್ಯ ಮತ್ತು ಕೌಶಲಗಳನ್ನು ಗಳಿಸಿಕೊಳ್ಳುತ್ತಾರೆ. ಆದ್ದರಿಂದ ಅವರನ್ನು ನಿರ್ದಿಷ್ಟ ಚಟುವಟಿಕೆಗಳಲ್ಲಿ ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ತೊಡಗಿಸಲಾಗುತ್ತದೆ. ಬೋಧನೋಪಕರಣಗಳು, ಸಂಶೋಧನಾ ಸಾಧನಗಳು, ಕಾರ್ಯಹಾಳೆಗಳು, ನಿಯೋಜಿತ ಕಾರ್ಯಗಳು ಮತ್ತು ಕೋರ್ಸ್ ಘಟಕಗಳು, ಮೌಲ್ಯಮಾಪನ ರುಬ್ರಿಕ್ಸ್ (rubrics) ಇವುಗಳ ತಯಾರಿಕೆಯಲ್ಲಿ ಕಲಿಕಾರ್ಥಿಗಳನ್ನು ತೊಡಗಿಸುವ ಮೂಲಕ ICTಯ ತಯಾರಿಕೆ ಮತ್ತು ಬಳಕೆಯ ಬಗ್ಗೆ ತರಬೇತಿಯನ್ನು ಒದಗಿಸಲಾಗುತ್ತದೆ. ಸೈದ್ಧಾಂತಿಕ ವಿಚಾರಗಳ ಮುಖಾಂತರ ವಿನನ್ನು ತಿಳಿದುಕೊಂಡಿದ್ದಾರೋ ಅವುಗಳನ್ನು ಕಾರ್ಯಾಚರಣೆಗೆ ತರಲು (ಅವುಗಳನ್ನು ತರಗತಿಯಲ್ಲಿ ಕಾರ್ಯಾಚರಣೆಗೊಳಿಸಲು) ಕಲಿಕಾರ್ಥಿಗಳಿಗೆ ಸಾಕಷ್ಟು ಅವಕಾಶಗಳನ್ನು ನೀಡಲಾಗುತ್ತದೆ. ಪ್ರತಿ ವರ್ಷ ಒಂದರಂತೆ ಆರುದಿನಗಳ ಅವಧಿಯ ಎರಡು ಕಾರ್ಯಾಗಾರಗಳನ್ನು ಕಾರ್ಯಕ್ರಮದಲ್ಲಿ ಆಯೋಜಿಸಲಾಗುತ್ತದೆ.

  d) **ಶಾಲಾ ಆಧಾರಿತ ಚಟುವಟಿಕೆಗಳು:** ಮುಕ್ತ ದೂರ ಕಲಿಕಾಕ್ರಮದಲ್ಲಿ ಬಿ.ಎಡ್. ಪದವಿ ಅಧ್ಯಯನ ನಡೆಸುವ ಕಲಿಕಾರ್ಥಿಗಳು ಹಲವಾರು ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ. ಅವುಗಳಲ್ಲಿ ಶಾಲಾ ಆಧಾರಿತ ಚಟುವಟಿಕೆಗಳು ಒಂದು. ಈ ಕಾರ್ಯಕ್ರಮದಲ್ಲಿ ಅಭ್ಯರ್ಥಿ ಅಥವಾ ಕಲಿಕಾರ್ಥಿ ಶಿಕ್ಷಕನು

ಹಲವಾರು ಅಂಶಗಳನ್ನು ನಿರ್ವಹಿಸಬೇಕು ಹಾಗೂ ಸ್ವತಃ ಅನುಭವಗಳನ್ನು ಗಳಿಸಿಕೊಳ್ಳಬೇಕು. ಶಾಲೆ ಆಧಾರಿತ ಚಟುವಟಿಕೆಗಳಲ್ಲಿ ಆತನು ನಿಯೋಜಿಸಲ್ಪಟ್ಟಶಾಲೆಯ ಅಧ್ಯಾಪಕರೊಂದಿಗೆ ಅಂದರೆ ಹಿರಿಯ ಮತ್ತು ಅನುಭವಿ ಅಧ್ಯಾಪಕರೊಂದಿಗೆ, ಪ್ರಾಂಶುಪಾಲರೊಂದಿಗೆ ಮುಖಾಮುಖಿ ಸಂವಹನ ಮಾಡಬೇಕಾಗುತ್ತದೆ ಹಾಗು ಶಾಲೆಗಳಲ್ಲಿ ಕಾರ್ಯನಿರ್ವಹಿಸಿ, ಶಾಲಾ ಆಧಾರಿತ ಚಟುವಟಿಕೆಗಳನ್ನು ಕುರಿತು ಕಾರ್ಯನಿರ್ವಹಿಸಬೇಕಾಗುತ್ತದೆ. ಇದರಲ್ಲಿ ಪಾಠಗಳನ್ನು ನೀಡುವಿಕೆ, ಪಾಠಗಳ ಅವಲೋಕನ ಇತ್ಯಾದಿ ಕಾರ್ಯಗಳನ್ನು, ಪ್ರಶಿಕ್ಷಣಾರ್ಥಿಯು ಕನಿಷ್ಟ ಹದಿನೈದು ಘಂಟೆಗಳ ಅವಧಿಯಲ್ಲಿ ಅವನ/ ಅವಳ ಮಾರ್ಗದರ್ಶಕರ ಮೇಲ್ವಿಚಾರಣೆಯಲ್ಲಿ ಪೂರ್ಣಗೊಳಿಸಬೇಕಾಗುತ್ತದೆ.

e) **ಬೋಧನಾ ಅಭ್ಯಾಸ:** ಬಿ.ಎಡ್. ಕಾರ್ಯಕ್ರಮಕ್ಕೆ ಸೇರ್ಪಡೆಗೊಂಡ ಕಲಿಕಾರ್ಥಿಗಳು ಮೂರು ತಿಂಗಳುಗಳ ಅಭ್ಯಾಸ ಬೋಧನೆಯಲ್ಲಿ ನಿರತರಾಗಿರಬೇಕು. ಈ ಅಭ್ಯಾಸ ಬೋಧನೆಯು ಅವರು ಕಾರ್ಯನಿರ್ವಹಿಸುವ ಶಾಲೆಗಳಲ್ಲಿ ಆ ಶಾಲೆಯ ಹಿರಿಯ ಶಿಕ್ಷಕರು ಅಥವಾ ಶೈಕ್ಷಣಿಕ ಮಾರ್ಗದರ್ಶಕರ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ. ಪ್ರತಿಯೊಂದು ಪಾಠಕ್ಕೂ ಮಾರ್ಗದರ್ಶನ ನೀಡುವುದು. ಮೇಲ್ವಿಚಾರಣೆ ನಡೆಸುವುದು ಹಾಗೂ ಮೌಲ್ಯೀಕರಿಸುವುದು ಮತ್ತು ವಿದ್ಯಾರ್ಥಿಗಳಿಗೆ ಪಾಠದ ಬಗ್ಗೆ ಹಿನ್ನುಣಿಕೆ ಅಥವಾ ಪ್ರತಿಪುಷ್ಟಿಯನ್ನು ಹಿರಿಯ ಶಿಕ್ಷಕರು ಅಥವಾ ಶಿಕ್ಷಕರ ಸಮಾಲೋಚಕರು ನೀಡುತ್ತಾರೆ. ಕಲಿಕಾರ್ಥಿಗೆ ಅವನ/ ಅವಳ ಕಾರ್ಯಕ್ಷಮತೆಯ ಗುಣ ಮತ್ತು ಮಿತಿಗಳ ಬಗ್ಗೆ ರಚನಾತ್ಮಕವಾದಂತಹ ಪ್ರತಿಪುಷ್ಟಿ ಅಥವಾ ಹಿನ್ನುಣಿಕೆಯನ್ನು ಮೇಲ್ವಿಚಾರಕರು ಅಥವಾ ಪ್ರಶಿಕ್ಷಕರು ನೀಡುತ್ತಾರೆ. ಹಾಗಾಗಿ ಕಲಿಕಾರ್ಥಿಗಳು ತಮ್ಮ ಮೇಲ್ವಿಚಾರಕರು/ಪ್ರಶಿಕ್ಷಕರೊಂದಿಗೆ ಪಾಠಯೋಜನೆ ತಯಾರಿಕೆಗೆ, ಪಾಠಗಳನ್ನು ತರಗತಿಯಲ್ಲಿ ನೀಡುವ ಬಗ್ಗೆ, ವಿದ್ಯಾರ್ಥಿಗಳಿಗೆ ಪಾಠ ಮಾಡಿದ ಬಗ್ಗೆ, ಹಿನ್ನುಣಿಕೆಯನ್ನು ಪಡೆದುಕೊಳ್ಳಲು ಚರ್ಚಿಸುತ್ತಾರೆ. ಅಭ್ಯಾಸ ಬೋಧನೆಗೆ ಸಂಬಂಧಿಸಿದಂತೆ ಪ್ರತಿ ಕಲಿಕಾರ್ಥಿ ತಮ್ಮ ಪ್ರಶಿಕ್ಷಕರಿಂದ/ ಮೇಲ್ವಿಚಾರಕರಿಂದ ವ್ಯಕ್ತಿಗತ ಹಿನ್ನುಣಿಕೆ/ಪ್ರತಿಪುಷ್ಟಿಯನ್ನು ಪಡೆದುಕೊಳ್ಳುತ್ತಾನೆ/ಳೆ.

10.1 ಬೋಧನಾ–ಕಲಿಕಾ ಅವಧಿ (ಬಿ.ಎಡ್.)

ಸಂಪರ್ಕ ಕಾರ್ಯಕ್ರಮ–I	8 ವಾರಗಳು	ಕಲಿಕಾರ್ಥಿ ಸಹಾಯ ಕೇಂದ್ರ
ಶೈಕ್ಷಣಿಕ ಆಪ್ತ ಸಮಾಲೋಚನೆ	72 ಗಂಟೆಗಳು (12 ದಿನಗಳು)	ಕಲಿಕಾರ್ಥಿ ಸಹಾಯ ಕೇಂದ್ರ
ಸಂಪರ್ಕ ಕಾರ್ಯಕ್ರಮ– II ಕಾರ್ಯಗಾರಗಳು, ವಿಚಾರ ಸಂಕಿರಣ, ವಿಷಯ ಮಂಡನೆ, ಪಾಠಯೋಜನೆ ಬರೆಯುವಿಕೆ, ಅಭ್ಯಾಸ ಬೋದನೆಗೆ ತಯಾರಿಕೆ, ಅಣುಬೋಧನೆ, ಸಿಮಿಲೇಟಡ್ ಬೋಧನೆ	4 ವಾರಗಳು	ಕಲಿಕಾರ್ಥಿ ಸಹಾಯ ಕೇಂದ್ರ
ಮೊದಲನೇ ವರ್ಷದ ಪರೀಕ್ಷೆಗಳು		
ಅಭ್ಯಾಸ ಬೋಧನೆ	4 ವಾರಗಳು	ಶಾಲಾ ಆಧಾರಿತ
ಶೈಕ್ಷಣಿಕ ಸಮಾಲೋಚನೆ (ವಾರಾಂತ್ಯಗಳಲ್ಲಿ)	72 ಗಂಟೆಗಳು (12 ದಿನಗಳು)	ಕಲಿಕಾರ್ಥಿ ಸಹಾಯ ಕೇಂದ್ರ
ಸಂಪರ್ಕ ಕಾರ್ಯಕ್ರಮ– III ಕಾರ್ಯಗಾರ, ವಿಚಾರಸಂಕಿರಣ, ವಿಷಯ ಮಂಡನೆ, ಅಭ್ಯಾಸ ಬೋಧನೆಗೆ ಸಿದ್ಧತೆ	8 ವಾರಗಳು	ಕಲಿಕಾರ್ಥಿ ಸಹಾಯ ಕೇಂದ್ರ
ಅಭ್ಯಾಸ ಬೋಧನೆ	8 ವಾರಗಳು	ಶಾಲಾ ಆಧಾರಿತ ಕೇಂದ್ರ
ಪ್ರಾಯೋಗಿಕ ಪರೀಕ್ಷೆಗಳು		
ದ್ವಿತೀಯ ವರ್ಷದ ಪರೀಕ್ಷೆಗಳು		

ವಿಶೇಷ ಸೂಚನೆ:

1. ಒಬ್ಬ ವಿದ್ಯಾರ್ಥಿಯು ಒಟ್ಟು 36 ವಾರಗಳ ಶೈಕ್ಷಣಿಕ ಕಾರ್ಯಕ್ರಮದ ಅವಧಿಯಲ್ಲಿ ಕನಿಷ್ಠ 80 ಪ್ರತಿಶತ ಹಾಜರಾತಿ ಹೊಂದಿರಬೇಕು.

2. ನಿಗದಿಪಡಿಸಿದ ಹಾಜರಾತಿ ಶೇಕಡವಾರನ್ನು ಕಾಪಾಡಿಕೊಳ್ಳಲು ವಿದ್ಯಾರ್ಥಿ ವಿಫಲರಾದಲ್ಲಿ, ಅಂತಿಮ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವುದಿಲ್ಲ.

11. ಪರೀಕ್ಷೆಯ ಕ್ರಮ

ಬಿ.ಎಡ್. ಪ್ರಥಮ ವರ್ಷ

ಕೋರ್ಸ್ ಕೋಡ್	ಕೋರ್ಸ್ ಶೀರ್ಷಿಕೆ	ಆಂತರಿಕ ಅಂಕಗಳು	ಸಿದ್ಧಾಂತ		ಒಟ್ಟು	ಉತ್ತೀರ್ಣ ರಾಗಲು ಕನಿಷ್ಠ ಅಂಕಗಳು	ಶ್ರೇಯಾಂಕ
			ಗರಿಷ್ಠ ಅಂಕಗಳು	ಉತ್ತೀರ್ಣ ರಾಗಲು ಕನಿಷ್ಠ ಅಂಕಗಳು			
ಬಿ.ಎಡ್. ಸಿ.ಸಿ.–01	ಬಾಲ್ಯಾವಸ್ಥೆ ಮತ್ತು ತಾರುಣ್ಯಾವಸ್ಥೆ	20	80	32	100	40	4
ಬಿ.ಎಡ್. ಸಿ.ಸಿ.–02	ಸಮಕಾಲೀನ ಭಾರತ ಮತ್ತು ಶಿಕ್ಷಣ	20	80	32	100	40	4
ಬಿ.ಎಡ್. ಸಿ.ಸಿ.–03	ಕಲಿಕೆ ಮತ್ತು ಬೋಧನೆಯ ತತ್ವಗಳು	20	80	32	100	40	4
ಬಿ.ಎಡ್. ಸಿ.ಸಿ.–04	ಪಠ್ಯಕ್ರಮದಾದ್ಯಂತ ಭಾಷೆ	10	40	16	50	20	2
ಬಿ.ಎಡ್. ಸಿ.ಸಿ.–05	ಶಾಸ್ತ್ರೀಯ ಕ್ರಮ ಮತ್ತು ವಿಷಯಗಳನ್ನು ಅರ್ಥೈಸಿಕೊಳ್ಳುವುದು	10	40	16	50	20	2
ಬಿ.ಎಡ್. ಸಿ.ಸಿ.–06	ಲಿಂಗ, ಶಾಲೆ ಮತ್ತು ಸಮಾಜ	10	40	16	50	20	2
ಬಿ.ಎಡ್. ಸಿ.ಸಿ.–09	ಜ್ಞಾನ ಮತ್ತು ಪಠ್ಯಕ್ರಮ	20	80	32	100	40	4
ಬಿ.ಎಡ್. ಸಿ.ಸಿ.–10	ಕಲಿಕೆಗಾಗಿ ಮೌಲ್ಯಮಾಪನ	20	80	32	100	40	4
ಬಿ.ಎಡ್. ಸಿ.ಸಿ.–11	ಸಮನ್ವಯ ಶಿಕ್ಷಣ	20	80	32	100	40	4
ಇ.ಎಫ್. – 1	ಸೂಕ್ಷ್ಮ ಬೋಧನೆ ಮತ್ತು ಸಂಯೋಜನೆ	50	–	20	50	20	2
ಇ.ಎಫ್. – 2	ಮನೋವೈಜ್ಞಾನಿಕ, ಸಾಮಾಜಿಕ ಸಾಧನಗಳು ಮತ್ತು ತಂತ್ರಗಳು	50	–	20	50	20	2
ಇ.ಎಫ್. – 3	ಪ್ರತ್ಯಾನುಕರಣ ಪಾಠ	50	–	20	50	20	2
	ಕಾರ್ಯಗಾರ – 1	100	–	40	100	40	4
ಬಿ.ಎಡ್. ಇ.ಪಿ.ಸಿ.–01	ಪಠ್ಯ ಓದುವುದು ಮತ್ತು ಪ್ರತಿಫಲಿಸುವುದು	50	–	20	50	20	2
ಬಿ.ಎಡ್. ಇ.ಪಿ.ಸಿ.–03	ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವಿಮರ್ಶಾತ್ಮಕ ಅರ್ಥೈಸುವಿಕೆ	50	–	20	50	20	2
ಪ್ರಥಮ ವರ್ಷದ ಒಟ್ಟು ಅಂಕಗಳು		**500**	**600**	–	**1100**	–	**44**

ಬಿ.ಎಡ್. ದ್ವಿತೀಯ ವರ್ಷ

ಕೋರ್ಸ್ ಕೋಡ್	ಕೋರ್ಸ್ ಶೀರ್ಷಿಕೆ	ಆಂತರಿಕ ಅಂಕಗಳು	ಸಿದ್ಧಾಂತ		ಒಟ್ಟು	ಉತ್ತೀರ್ಣ ರಾಗಲು ಕನಿಷ್ಠ ಅಂಕಗಳು	ಶ್ರೇಯಾಂಕ
			ಗರಿಷ್ಠ ಅಂಕಗಳು	ಉತ್ತೀರ್ಣ ರಾಗಲು ಕನಿಷ್ಠ ಅಂಕಗಳು			
ಬಿ.ಎಡ್. POSS-07/08	ಶಾಲಾ ವಿಷಯ ಬೋಧನಾಶಾಸ್ತ್ರ–1	20	80	32	100	40	4
ಬಿ.ಎಡ್. POSS-07/08	ಶಾಲಾ ವಿಷಯ ಬೋಧನಾಶಾಸ್ತ್ರ–2	20	80	32	100	40	4
ಬಿ.ಎಡ್. ಸಿ.ಸಿ. 12	ಮುಕ್ತ ಮತ್ತು ದೂರ ಶಿಕ್ಷಣ	20	80	32	100	40	4
ಬಿ.ಎಡ್. ಓ.ಸಿ.–12(ಎ) ಅಥವಾ ಬಿ.ಎಡ್. ಓ.ಸಿ.–12(ಬಿ)	ಮಾರ್ಗದರ್ಶನ ಮತ್ತು ಉಪಬೋಧೆ ಅಥವಾ ಪರಿಸರ ಶಿಕ್ಷಣ	10	40	16	50	20	2
ಇ.ಎಫ್. – 4	ಕ್ರಿಯಾ ಸಂಶೋಧನಾ ವರದಿ	50	–	20	50	20	2

	ಕಾರ್ಯಗಾರ – 1	100	–	40	100	40	4
ಬಿ.ಎಡ್. ಇ.ಪಿ.ಸಿ.–02	ಶಿಕ್ಷಣದಲ್ಲಿ ನಾಟಕ ಮತ್ತು ಕಲೆ	50	–	20	50	20	2
ಬಿ.ಎಡ್. ಇ.ಪಿ.ಸಿ.–04	ಸ್ವಯಂನ್ನು ಅರ್ಥೈಸಿಕೊಳ್ಳುವುದು	50	–	20	50	20	2
ಇಂಟರ್ನ್‌ಶಿಪ್ POSS-I	ಪ್ರಾಕ್ಟಿಕಮ್– I	150	–	60	150	60	6
ಇಂಟರ್ನ್‌ಶಿಪ್ POSS-II	ಪ್ರಾಕ್ಟಿಕಮ್– II	150	–	60	150	60	6
ಪ್ರಾಯೋಗಿಕ ಪರೀಕ್ಷೆ– I		–	100	40	100	40	4
ಪ್ರಾಯೋಗಿಕ ಪರೀಕ್ಷೆ– II		–	100	40	100	40	4
ದ್ವಿತೀಯ ವರ್ಷದ ಒಟ್ಟು ಅಂಕಗಳು					**1200**		**48**
ಪ್ರಥಮ ವರ್ಷದ ಒಟ್ಟು ಅಂಕಗಳು					**1100**		**44**
ಒಟ್ಟು ಅಂಕಗಳು					**2300**		**92**

ಸೂಚನೆ:

1. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಜಾಲತಾಣ www.ksoumysuru.ac.in ಅರ್ಜಿ ನಮೂನೆಯನ್ನು ಅವರ ಪ್ರವೇಶಾತಿಯನ್ನು ಖಚಿತಪಡಿಸಿಕೊಳ್ಳಲು ನಿರ್ಧರಿತ ಕಡೇ ದಿನಾಂಕದೊಳಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
2. ಪರೀಕ್ಷೆಯನ್ನು ವಾರ್ಷಿಕವಾಗಿ ನಡೆಸಲಾಗುವುದು.
3. ಪೂರಕ ಪರೀಕ್ಷೆ ಇರುವುದಿಲ್ಲ.
4. ಆಂತರಿಕ ನಿಬಂಧನೆಗಳಿಗೆ ಕನಿಷ್ಠ ಅಂಕಗಳಿರುವುದಿಲ್ಲ.

10.2 ಬಿ.ಎಡ್. ಶಿಕ್ಷಣ ಕ್ರಮದ ಶ್ರೇಯಾಂಕ ಪದ್ಧತಿ

ವಿದ್ಯಾರ್ಥಿಗಳು 92 ಶ್ರೇಯಾಂಕಗಳಿಗೆ ಬಿ.ಇಡಿ ಕಾರ್ಯಕ್ರಮವನ್ನು ಅಧ್ಯಯನ ಮಾಡುತ್ತಾರೆ. ಪ್ರತಿ ಕೋರ್ಸ್ 2 ರಿಂದ 4 (ಸೈದ್ಧಾಂತಿಕ) ವರೆಗಿನ ಶ್ರೇಯಾಂಕಗಳನ್ನು ಒಳಗೊಂಡಿರುತ್ತದೆ. ಪ್ರತಿ ಶ್ರೇಯಾಂಕ 30 ಗಂಟೆಗಳ ಅಧ್ಯಯನವನ್ನು ಒಳಗೊಂಡಿರುತ್ತದೆ. ಆದ್ದರಿಂದ, 2 ಶ್ರೇಯಾಂಕದ ಕೋರ್ಸ್ 60 ಗಂಟೆಗಳ ಅಧ್ಯಯನವನ್ನು ಒಳಗೊಂಡಿರುತ್ತದೆ ಮತ್ತು 4 ಶ್ರೇಯಾಂಕದ ಕೋರ್ಸ್ 120 ಗಂಟೆಗಳ ಅಧ್ಯಯನವನ್ನು ಒಳಗೊಂಡಿರುತ್ತದೆ.

11 ಪ್ರವೇಶಕ್ಕೆ ಅರ್ಜಿಸಲ್ಲಿಸುವುದು ಹೇಗೆ?

1. ಅರ್ಜಿಯನ್ನು ಆನ್‌ಲೈನ್ ಮೂಲಕ ಭರ್ತಿ ಮಾಡುವ ಹಂತಗಳು. ವಿಶ್ವವಿದ್ಯಾನಿಲಯದ ಅಂತರ್ಜಾಲ www.ksoumysuru.ac.in.
2. ಅಭ್ಯರ್ಥಿಗಳು ರೂ. 2200/–ಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆ ಶುಲ್ಕವಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡಿದ ನಂತರ ಪಾವತಿಸುವುದು.
3. ನೋಂದಣಿ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಪೂರ್ಣಗೊಳಿಸಿದ ನಂತರ ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
4. ಅಭ್ಯರ್ಥಿಗಳು ಆನ್‌ಲೈನ್ ಪ್ರಕ್ರಿಯೆ ಅಂತಿಮಗೊಳಿಸಿದ ನಂತರ ಅರ್ಜಿಯ ಪ್ರತಿಯನ್ನು ಪ್ರಿಂಟ್ ಪಡೆಯುವುದು.
5. ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.
6. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
7. ಆಯ್ಕೆಯಾದ ಅಭ್ಯರ್ಥಿಗಳು ಪ್ರವೇಶಾತಿ ಸಮಾಲೋಚನೆ ಮತ್ತು ದಾಖಲಾತಿಗಳ ಪರಿಶೀಲನೆಗಾಗಿ ಶಿಕ್ಷಣಶಾಸ್ತ್ರ ವಿಭಾಗ, ಕರಾಮುವಿ, ಮೈಸೂರು ಇಲ್ಲಿಗೆ ಭೇಟಿ ನೀಡುವುದು.
8. ಅಂತಹ ಅಭ್ಯರ್ಥಿಗಳು ಪ್ರಿಂಟ್ ಪಡೆದ ಅರ್ಜಿಯ ಜೊತೆ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ತರಬೇಕಾಗುತ್ತದೆ.
9. ಆಯ್ಕೆಯಾದ ಅಭ್ಯರ್ಥಿಗಳ ದಾಖಲಾತಿಗಳನ್ನು ಪ್ರವೇಶಾತಿ ಸಮಾಲೋಚನಾ ಸಂದರ್ಭದಲ್ಲಿ ಪರಿಶೀಲಿಸಲಾಗುತ್ತದೆ.

10. ಸ್ಥಾನಗಳ ಹಂಚಿಕೆ ಕೋಷ್ಟಕ ಪ್ರಕಾರ ಯಶಸ್ವಿಯಾಗಿ ದಾಖಲಾತಿಗಳ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳಿಸಿದ ಅಭ್ಯರ್ಥಿಗಳ ಹೆಸರುಗಳನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
11. ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿಗಳ ಪರಿಶೀಲನೆ ನಂತರ ನಿಗದಿತ ಶುಲ್ಕವನ್ನು ಪಾವತಿಸುವುದು.

ಸೂಚನೆ:

ಎ) ಅಭ್ಯರ್ಥಿಗಳ ಪರಿಷ್ಕೃತ ಮಾಹಿತಿಗಾಗಿ (for updates) ವಿಶ್ವವಿದ್ಯಾನಿಲಯದ ಅಂತರ್ಜಾಲವನ್ನು ವೀಕ್ಷಿಸುವುದು.

ಬಿ) ಅಭ್ಯರ್ಥಿಗಳು ಅನ್‌ಲೈನ್ ನೋಂದಣಿ ಸಮಯದಲ್ಲಿ ಪಡೆದ ಪಾಸ್‌ವರ್ಡ್‌ನ್ನು ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಕಾಪಾಡಿಕೊಳ್ಳುವುದು.

13. ಮೌಲ್ಯಮಾಪನ

ಮೌಲ್ಯಮಾಪನ ಕ್ರಮವು ಈ ಕೆಳಗಿನ ಅಂಶಗಳಿಂದ ಕೂಡಿದೆ.

1. ಆಂತರಿಕ ಮೌಲ್ಯಮಾಪನ (I.A. ನಿಬಂಧ ಸಲ್ಲಿಸುವ ಮುಖಾಂತರ) –20 ಅಂಕಗಳು
2. ವರ್ಷಾಂತ್ಯ ಪರೀಕ್ಷೆ–80 ಅಂಕಗಳಿಗೆ

1. ಆಂತರಿಕ ಮೌಲ್ಯಮಾಪನ

ಬಿ.ಎಡ್. ಶಿಕ್ಷಣ ಕ್ರಮದಲ್ಲಿ ಆಂತರಿಕ ನಿಬಂಧಗಳು ದೂರಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿದೆ. ನಿಬಂಧಗಳ ಮುಖ್ಯ ಉದ್ದೇಶ ಅಧ್ಯಯನ ಸಾಮಗ್ರಿಗಳಿಂದ ವಿದ್ಯಾರ್ಥಿಗಳು ಎಷ್ಟರಮಟ್ಟಿನ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವುದೇ ಆಗಿದೆ. ಅಧ್ಯಯನವನ್ನು ಹೇಗೆ ನಡೆಸಿದ್ದಾರೆ ಎಂಬುದನ್ನು ತಿಳಿದುಕೊಂಡು, ವಿದ್ಯಾರ್ಥಿಯ ಸಾಧನಾ ಮಟ್ಟವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

- ಆಂತರಿಕ ನಿಬಂಧಗಳನ್ನು ಪ್ರವೇಶ ಪಡೆದ ವರ್ಷದಲ್ಲಿಯೇ ಸಲ್ಲಿಸಬೇಕು. ಮುಂದಿನ ವರ್ಷಗಳಲ್ಲಿ ನಿಬಂಧ ಸಲ್ಲಿಕೆಗೆ ಅವಕಾಶವಿರುವುದಿಲ್ಲ. ಒಂದು ವೇಳೆ ವಿದ್ಯಾರ್ಥಿಯ ಆಂತರಿಕ ನಿಬಂಧಗಳನ್ನು ಸಲ್ಲಿಸದಿದ್ದರೆ ಆಂತರಿಕ ಅಂಕಗಳು ದೊರೆಯುವುದಿಲ್ಲ. ವಿದ್ಯಾರ್ಥಿಯನ್ನು ವಾರ್ಷಿಕ ಪರೀಕ್ಷೆಯ 80 ಅಂಕಗಳಿಂದ ಮಾತ್ರ ಮೌಲ್ಯಮಾಪನ ಮಾಡಲಾಗುವುದು.
- ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದ ನಿಬಂಧಗಳನ್ನು ವಿಶ್ವವಿದ್ಯಾನಿಲಯವು ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ. ಆದ್ದರಿಂದ ನೀವು ನಿಗದಿಪಡಿಸಿದ ದಿನಾಂಕದೊಳಗೆ ಸಲ್ಲಿಸಲು ತಿಳಿಸಲಾಗಿದೆ.
- ವಿದ್ಯಾರ್ಥಿಗಳು ಸಲ್ಲಿಸಿದ ಎಲ್ಲಾ ನಿಬಂಧಗಳ ಛಾಯಾ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳಬೇಕು ಹಾಗೂ ಸ್ವೀಕೃತಿ ಪತ್ರವನ್ನು ಕಾಪಾಡಿಕೊಳ್ಳಬೇಕು.
- ಆಂತರಿಕ ನಿಬಂಧಗಳ ಮರುಮೌಲ್ಯಮಾಪನಕ್ಕೆ ಅವಕಾಶವಿಲ್ಲ..
- ನಿಬಂಧಗಳ ಪ್ರಶ್ನೆಗಳನ್ನು ಸಂಪರ್ಕ ಕಾರ್ಯಕ್ರಮದ ಅವಧಿಯಲ್ಲಿ ಬಿ.ಎಡ್. ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಲಭ್ಯವಿರುತ್ತವೆ.
- ಆಂತರಿಕ ನಿಬಂಧಗಳನ್ನು ನಿಗದಿಪಡಿಸಿದ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಸಲ್ಲಿಸಬೇಕಾಗುತ್ತದೆ.

2. ವಾರ್ಷಿಕ ಪರೀಕ್ಷೆ:

ವಿಶ್ವವಿದ್ಯಾನಿಲಯವು ವಾರ್ಷಿಕ ಪರೀಕ್ಷೆಯನ್ನು ವರ್ಷಕ್ಕೆ ಒಂದು ಬಾರಿ ಕಾರ್ಯಕ್ರಮ ದಿನಸೂಚಿಯಂತೆ ನಡೆಸುತ್ತದೆ. ಪೂರಕ ಪರೀಕ್ಷೆಗೆ ಅವಕಾಶವಿರುದಿಲ್ಲ.

ಪರೀಕ್ಷಾ ಕ್ರಮ ಪ್ರತಿ ಪತ್ರಿಕೆಗೆ ಸಂಬಂಧಿಸಿದಂತೆ

ವಿವರಗಳು	ಅಂಕಗಳು	ಕನಿಷ್ಟ ಅಂಕ

ಆಂತರಿಕ ಅಂಕ (100 ಅಂಕಗಳ ಪತ್ರಿಕೆ)	20	ಇಲ್ಲ
ಆಂತರಿಕ ಅಂಕ (50 ಅಂಕಗಳ ಪತ್ರಿಕೆ)	10	ಇಲ್ಲ
ವಾರ್ಷಿಕ ಪರೀಕ್ಷೆ (100 ಅಂಕಗಳ ಪತ್ರಿಕೆ)	80	32
ವಾರ್ಷಿಕ ಪರೀಕ್ಷೆ (50 ಅಂಕಗಳ ಪತ್ರಿಕೆ)	40	16
ಪತ್ರಿಕೆ ವಿನಾಯಿತಿ	100	40
ಪತ್ರಿಕೆ ವಿನಾಯಿತಿ	50	20
ಉತ್ತೀರ್ಣತೆಗೆ ಸರಾಸರಿ		40%

ಪರೀಕ್ಷಾ ಶುಲ್ಕ ವಿವರ

ಬಿ.ಎಡ್	ಪ್ರಥಮ ವರ್ಷ (ರೂ.)	ದ್ವಿತೀಯ ವರ್ಷ (ರೂ.)
ಪರೀಕ್ಷಾ ಶುಲ್ಕ	2200/–	2200/–

ಸೂಚನೆ:

1. ವಿದ್ಯಾರ್ಥಿಗಳು ಸಂಪರ್ಕ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಹಾಜರಾಗಬೇಕು.
2. ವಿದ್ಯಾರ್ಥಿಗಳು ಅಗತ್ಯ ಆಂತರಿಕ ನಿಬಂಧಗಳು ಮತ್ತು ಪ್ರಾಯೋಗಿಕ ಅಂಶಗಳನ್ನು ಪೂರ್ಣಗೊಳಿಸಲೇಬೇಕು.

ಶುಲ್ಕ ಪಾವತಿ ಕ್ರಮ

ನಿಗದಿಪಡಿಸಿದ ಶುಲ್ಕವನ್ನು ಆನ್–ಲೈನ್ ಕ್ರಮದ ಮುಖಾಂತರ ಪಾವತಿಸಬೇಕು (ಆನ್‌ಲೈನ್ ಅರ್ಜಿಯ ಜೊತೆಯಿರುವ ಸೂಚನೆಗಳಂತೆ).

ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಗರಿಷ್ಠ ಅವಧಿ

ಸಾಮಾನ್ಯವಾಗಿ ಅಭ್ಯರ್ಥಿಯು ನಿರ್ದಿಷ್ಟ ಕಾರ್ಯಕ್ರಮಕ್ಕಾಗಿ (B.Ed.) ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಕನಿಷ್ಠ ಅವಧಿಯೊಳಗೆ ಕಾರ್ಯಕ್ರಮವನ್ನು ಪೂರ್ಣಗೊಳಿಸುವ ನಿರೀಕ್ಷೆಯಿದೆ. ಆದಾಗ್ಯೂ, ಯಾವುದೇ ಕಾರಣಗಳಿಗಾಗಿ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಸಾಮಾನ್ಯ ಅಥವಾ ಕನಿಷ್ಠ ಅವಧಿಯೊಳಗೆ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಸಾಧ್ಯವಾಗದ ವಿದ್ಯಾರ್ಥಿಯು ಪದವಿಗೆ ಅರ್ಹತೆ ಪಡೆಯಲು ಪೂರ್ಣಗೊಳಿಸದೆ ಉಳಿದಿರುವ ಕೋರ್ಸ್‌ಗಳನ್ನು ಪೂರ್ಣಗೊಳಿಸಲು ಸಾಮಾನ್ಯ ಅವಧಿಯನ್ನು ಮೀರಿ ಮೂರು ವರ್ಷಗಳ ಅವಧಿಯನ್ನು ಅನುಮತಿಸಲಾಗುತ್ತದೆ. (NCTE ನಿಯಮಗಳಿಗೆ ಅನುಸಾರವಾಗಿ).

14. ಕೌಶಲ್ಯ ಅಭಿವೃದ್ಧಿ ತರಬೇತಿ:

ಭಾರತ ಸರ್ಕಾರ, ವಿಶ್ವವಿದ್ಯಾನಿಲಯ ಅನುದಾನ ಆಯೋಗಮತ್ತು ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ಮಂಡಲಿ ಇವುಗಳ ನಿರ್ದೇಶನದಂತೆ, ವಿಶ್ವವಿದ್ಯಾನಿಲಯವು ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಆರಂಭಿಸಿದೆ. ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆಯುವ ಪದವಿ, ಸ್ನಾತಕೋತ್ತರ ಪದವಿಯ ಕಲಿಕಾರ್ಥಿಗಳು ಕೆಳಕಂಡ ಯಾವುದಾದರೂ ವಿಷಯಗಳನ್ನು ಆರಿಸಿಕೊಳ್ಳಬಹುದು.

ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ಪ್ರಾದೇಶಿಕ ಕೇಂದ್ರಗಳಲ್ಲಿ ಮತ್ತು ಕೇಂದ್ರಸ್ಥಾನ ಮೈಸೂರಿನಲ್ಲಿ ಮಾತ್ರ ನೀಡಲಾಗುವುದು. ಪರಿಣತ ಅನುಭವೀ ತರಬೇತುದಾರರು ಕಲಿಕಾರ್ಥಿಗಳಿಗೆ ಎಲ್ಲಾ ಹಂತಗಳಲ್ಲಿ ಕೌಶಲ್ಯ ತರಬೇತಿ ನೀಡುವರು. ಕಲಿಕಾರ್ಥಿಗಳು ಎಚ್ಚರಿಕೆಯಿಂದ ಕೌಶಲ್ಯ ವಿಷಯಗಳನ್ನು ಆರಿಸಿಕೊಂಡು, ಪ್ರವೇಶ ಅರ್ಜಿಯಲ್ಲಿ ನಮೂದಿಸಬೇಕು.

ಈ ಕಾರ್ಯಕ್ರಮವನ್ನು ವಿದ್ಯಾರ್ಥಿ ಪ್ರವೇಶ ಪಡೆದ ಪ್ರಥಮ ವರ್ಷದಲ್ಲಿ ಆರಿಸಿಕೊಂಡು ತನ್ನ ಶಿಕ್ಷಣಕ್ರಮ ಪೂರ್ಣಗೊಳ್ಳುವವರೆವಿಗೂ ಮುಂದುವರೆಸಬಹುದಾಗಿದೆ. ವಿದ್ಯಾರ್ಥಿ ಒಮ್ಮೆ ನಿರ್ದಿಷ್ಟ ವಿಷಯವನ್ನು

ಆರಿಸಿಕೊಂಡ ನಂತರ ಯಾವುದೇ ಸಂದರ್ಭದಲ್ಲೂ ಬದಲಾಯಿಸಲೂ ಅವಕಾಶವಿರುವುದಿಲ್ಲ. ಪ್ರತಿ ಹಂತದ ಕೌಶಲ್ಯ ಅಭಿವೃದ್ಧಿ ಶಿಕ್ಷಣವು 2 ಶ್ರೇಯಾಂಕಗಳನ್ನು (Two credits) ಹೊಂದಿದೆ. ಈ ವಿಷಯಗಳಿಗೆ ವಿಶ್ವವಿದ್ಯಾನಿಲಯವು ಯಾವುದೇ ಪರೀಕ್ಷೆಗಳನ್ನು ನಡೆಸುವುದಿಲ್ಲ. ಆದಾಗ್ಯೂ ಶ್ರೇಯಾಂಕ ಗಳಿಕೆಯನ್ನು ಪರಿಗಣಿಸಲಾಗುವುದು. ಕೌಶಲ್ಯ ಅಭಿವೃದ್ಧಿ ತರಬೇತಿಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಾಗಿರುತ್ತದೆ.

ಕೌಶಲ್ಯ ಅಭಿವೃದ್ಧಿ ತರಬೇತಿ ವಿಷಯಗಳು:

1. ಬೇಸಿಕ್ ಕಂಪ್ಯೂಟರ್ ನೆಟ್‌ವರ್ಕಿಂಗ್
2. ಕಂಪ್ಯೂಟರ್‌ನ ಮೂಲತತ್ತ್ವಗಳು (Computer fundamentals)
3. ಬಹುಮಾಧ್ಯಮ (Multimedia)
4. ವೆಬ್‌ಡಿಸೈನಿಂಗ್
5. ಡೆಸ್ಕ್‌ಟಾಪ್ ಪಬ್ಲಿಷಿಂಗ್
6. ಇಂಗ್ಲಿಷ್ ಫಾರ್ ಕಮ್ಯೂನಿಕೇಷನ್ ಅಂಡ್ ಸಾಫ್ಟ್ ಸ್ಕಿಲ್ಸ್
7. ಆಡಳಿತ ಕನ್ನಡ.

ನೀವು ಆಯ್ಕೆ ಮಾಡಿಕೊಂಡಿರುವ ವಿಷಯದ ಆಧಾರದ ಮೇಲೆ ಉಪನ್ಯಾಸ (ಥಿಯರಿ) ಮತ್ತು ಪ್ರಾಯೋಗಿಕ ತರಗತಿಗಳ ಅವಧಿಯು ಅವಲಂಬಿತವಾಗುವುದು. ವಿಶ್ವವಿದ್ಯಾನಿಲಯದ ಜಾಲತಾಣದಿಂದ ಪಠ್ಯಕ್ರಮವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಕೌಶಲ್ಯ ಅಭಿವೃದ್ಧಿ ತರಬೇತಿಯ ವೇಳಾಪಟ್ಟಿಯನ್ನು ತಿಳಿಸಲಾಗುವುದು.

15. ತಾತ್ಕಾಲಿಕ ಶೈಕ್ಷಣಿಕ ಯೋಜನೆ – ಬಿ.ಎಡ್.

ವಿಶ್ವವಿದ್ಯಾನಿಲಯದ ಬಿ.ಎಡ್. ಶಿಕ್ಷಣ ಕ್ರಮಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕವಾಗಿ ಶೈಕ್ಷಣಿಕ ಯೋಜನೆಯನ್ನು ಈ ಕೆಳಕಂಡಂತೆ ನೀಡಿದೆ.

ಪಟ್ಟಿ–1 ಬಿ.ಎಡ್. ಶಿಕ್ಷಣ ಕಾರ್ಯಕ್ರಮದ ತಾತ್ಕಾಲಿಕ ವಾರ್ಷಿಕ ಶೈಕ್ಷಣಿಕ ಯೋಜನೆ
(ವಾರ್ಷಿಕ ಕ್ರಮ)
ಬಿ.ಎಡ್. ಪ್ರಥಮ ವರ್ಷ

ಕ್ರಮ ಸಂ.	ಶೈಕ್ಷಣಿಕ ಚಟುವಟಿಕೆಗಳು	ತಿಂಗಳು ಮತ್ತು ವರ್ಷ
1	ಪ್ರವೇಶ ಪ್ರಕಟಣೆ ಮತ್ತು ಆನ್–ಲೈನ್ ಮುಖಾಂತರ ಅರ್ಜಿಸಲ್ಲಿಕೆ	01.09.2025
2	ಆನ್–ಲೈನ್ ನೊಂದಣಿಗೆ ಕೊನೆಯ ದಿನಾಂಕ	21.09.2025
3	ಸಾಮಾನ್ಯ ಪ್ರವೇಶ ಪರೀಕ್ಷೆ ದಿನಾಂಕ	28ನೇ ಸೆಪ್ಟೆಂಬರ್ 2025
4.	ಸಿ.ಇ.ಟಿ. ಪರೀಕ್ಷೆಯ ಉತ್ತರಗಳ ಪ್ರಕಟಣೆ	28.09.2025
5	ಸಿ.ಇ.ಟಿ. ಪ್ರಶ್ನೆಗಳ ಉತ್ತರಗಳಿಗೆ ಸಂಬಂಧಿಸಿದಂತೆ ಅಕ್ಷೇಪಣೆ ಸ್ವೀಕಾರದ ಕಡೆದಿನಾಂಕ	01.10.2025
6.	ಸಿ.ಇ.ಟಿ. ಪರೀಕ್ಷೆಯ ಫಲಿತಾಂಶ ಪ್ರಕಟಣೆ	04.10.2025
7.	ಆಯ್ಕೆ ಪಟ್ಟಿ ಪ್ರಕಟಣೆ	04.10.2025
8.	ಪ್ರವೇಶ/ ಸಮಾಲೋಚನೆ	07.10.2025& 08.10.2025
9	ಶುಲ್ಕ ಪಾವತಿಯ ದಿನಾಂಕ	ಸಮಾಲೋಚನೆಯ ದಿನಗಳಂದು
10	ಸಂಪರ್ಕ ಕಾರ್ಯಕ್ರಮ–1	ಏಪ್ರಿಲ್/ಮೇ 2026 (ತಾತ್ಕಾಲಿಕ)
11	ಶೈಕ್ಷಣಿಕ ಸಮಾಲೋಚನೆ (ವಾರಾಂತ್ಯ)	ಜೂನ್/ಜುಲೈ 2026 (ತಾತ್ಕಾಲಿಕ)

12	ಸಂಪರ್ಕ ಕಾರ್ಯಕ್ರಮ–2 ಕಾರ್ಯಾಗಾರಗಳು ಮತ್ತು ವಿಚಾರಸಂಕಿರಣಗಳು	ಸೆಪ್ಟಂಬರ್ 2026
13	ಅಭ್ಯಾಸ ಬೋಧನೆ–1	ಅಕ್ಟೋಬರ್ 2026
14	ಪ್ರಥಮ ವರ್ಷದ ಆಂತರಿಕ ನಿಬಂಧಗಳ ಸಲ್ಲಿಕೆ	ಅಕ್ಟೋಬರ್ 2026
15	ಪ್ರಥಮ ವರ್ಷದ ಪರೀಕ್ಷಾ ಶುಲ್ಕ ಪಾವತಿ	ಅಕ್ಟೋಬರ್ 2026
16	ಪ್ರಥಮ ವರ್ಷದಪರೀಕ್ಷೆ	ನವೆಂಬರ್ 2026
ಬಿ.ಎಡ್. ದ್ವಿತೀಯ ವರ್ಷ		
1	ದ್ವಿತೀಯ ವರ್ಷದ ಬೋಧನಾ ಶುಲ್ಕ ಪಾವತಿ	ಆನವರಿ/ಪೆಬ್ರವರಿ 2027 (ತಾತ್ಕಾಲಿಕ)
2	ಸಂಪರ್ಕ ಕಾರ್ಯಕ್ರಮ–3	ಏಪ್ರಿಲ್/ಮೇ 2027
3	ಶೈಕ್ಷಣಿಕ ಸಮಾಲೋಚನೆ (ವಾರಾಂತ್ಯ)	ಜೂನ್/ಜುಲೈ 2027
4	ಅಭ್ಯಾಸ ಬೋಧನೆ– II	ಜುಲೈ/ಆಗಸ್ಟ್ 2027
5	ಕಾರ್ಯಾಗಾರಗಳು ಮತ್ತು ವಿಚಾರ ಸಂಕಿರಣಗಳು	ಸೆಪ್ಟಂಬರ್ 2027
6	ದ್ವಿತೀಯ ವರ್ಷದ ಆಂತರಿಕ ನಿಬಂಧಗಳ ಸಲ್ಲಿಕೆ	ಅಕ್ಟೋಬರ್ 2027
7	ದ್ವಿತೀಯ ವರ್ಷದ ಪರೀಕ್ಷಾ ಶುಲ್ಕ ಪಾವತಿ	ಅಕ್ಟೋಬರ್ 2027
8	ಪ್ರಾಯೋಗಿಕ ಪರೀಕ್ಷೆ	ನವೆಂಬರ್ 2027
9	ದ್ವಿತೀಯ ವರ್ಷದ ಪರೀಕ್ಷೆ	ನವೆಂಬರ್ 2027

16. ವಿದ್ಯಾರ್ಥಿ ಬೆಂಬಲ ಸೇವೆಗಳು

ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ಸ್ನೇಹಿ ಬೆಂಬಲ ಸೇವೆಗಳನ್ನು ಸೃಜಿಸಿದೆ. ವಿದ್ಯಾರ್ಥಿ ಬೆಂಬಲ ಸೇವೆಗಳು ಯಾವುದೇ ತೊಂದರೆಗಳಿಲ್ಲದೆ ಕೇಂದ್ರ ಸ್ಥಾನದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಇಂತಹ ಸೇವೆಗಳನ್ನು ಪ್ರಾದೇಶಿಕ ಕೇಂದ್ರ ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ ಒದಗಿಸಲಾಗುವುದು.

ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳು

ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಕಟಿಬದ್ಧವಾಗಿದೆ. ಕರಾಮುವಿಯು ಪ್ರಾದೇಶಿಕ ಕೇಂದ್ರಗಳನ್ನು ಕರ್ನಾಟಕ ರಾಜ್ಯಾದ್ಯಂತ ಸ್ಥಾಪಿಸಿದೆ ಮತ್ತು ಶೈಕ್ಷಣಿಕ ದೃಷ್ಟಿಯಿಂದ ವಿದ್ಯಾರ್ಥಿ ಮತ್ತು ವಿಶ್ವವಿದ್ಯಾನಿಲಯದ ನಡುವೆ ಅನ್ಯೋನ್ಯ ಕ್ರಿಯೆಯನ್ನು ಒದಗಿಸುತ್ತಿದೆ (**ನೋಡಿ : ಅನುಬಂಧ–2**).

ಕರಾಮುವಿಯು ಮೂರು ಹಂತದ ವ್ಯವಸ್ಥೆಯ ವಿದ್ಯಾರ್ಥಿ ಬೆಂಬಲ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ –

ಅ. ಕೇಂದ್ರಸ್ಥಾನ
ಆ. ಪ್ರಾದೇಶಿಕ ಕೇಂದ್ರಗಳು
ಇ. ಕಲಿಕಾರ್ಥಿ ಸಹಾಯ ಕೇಂದ್ರಗಳು(ಅಧ್ಯಯನ ಕೇಂದ್ರಗಳು)

ಕೇಂದ್ರ ಕಚೇರಿಯು ಪ್ರಾದೇಶಿಕ ಕೇಂದ್ರಗಳ ಮತ್ತು ಅಧ್ಯಯನ ಕೇಂದ್ರಗಳ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಪ್ರಾದೇಶಿಕ ಕೇಂದ್ರದಲ್ಲಿ ಪ್ರಾದೇಶಿಕ ನಿರ್ದೇಶಕರು ಇರುತ್ತಾರೆ. ಇಲ್ಲಿ ಪ್ರವೇಶಾತಿ ಪ್ರಕ್ರಿಯೆ, ಅಧ್ಯಯನ ಸಾಮಗ್ರಿಗಳ ವಿತರಣೆ, ಸಮಾಲೋಚನೆ ಮತ್ತು ಸಂಪರ್ಕ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ನಿರಂತರ ಮೌಲ್ಯಮಾಪನ ನಡೆಯುತ್ತದೆ. ವಿಶ್ವವಿದ್ಯಾನಿಲಯದ ಸೂಚನೆಯಂತೆ ಪ್ರಾದೇಶಿಕ ಕೇಂದ್ರಗಳು ಕಾಲಕಾಲಕ್ಕೆ

ವಿದ್ಯಾರ್ಥಿಗಳಿಗೆ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತವೆ. (ನೋಡಿ: ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳ ಪಟ್ಟಿ: **ಅನುಬಂಧ–II**)

ಮೈಸೂರಿನ ಕೇಂದ್ರ ಕಛೇರಿಯಲ್ಲಿರುವ ಗ್ರಂಥಾಲಯ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯವು 1996 ರಿಂದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ಸಿಬ್ಬಂದಿಗಳ ಶೈಕ್ಷಣಿಕ ಮತ್ತು ಸಂಶೋಧನೆಯ ಅಗತ್ಯವನ್ನು ಪೂರೈಸುತ್ತಿದೆ.ಇಂದು ಗ್ರಂಥಾಲಯದಲ್ಲಿ ಒಂದು ಲಕ್ಷಕ್ಕೂ ಅಧಿಕ ಗ್ರಂಥಗಳು ಓದುಗರಿಗೆ ಗ್ರಂಥಾಲಯದಲ್ಲಿ ಲಭ್ಯವಿದ್ದು, ಪುಸ್ತಕಗಳು, ನಿಯತಕಾಲಿಕೆಗಳು, ಪರಾಮರ್ಶನ ಪುಸ್ತಕಗಳು, ವಿಶ್ವಕೋಶಗಳು, ವರದಿಗಳು, ಪ್ರಬಂಧಗಳು, ದೃಶ್ಯ–ಶ್ರವ್ಯ ಸಾಮಗ್ರಿಗಳು, CD/DVD ಗಳು ಮತ್ತು ಇತರೆ ಸಾಮಗ್ರಿಗಳು ಗ್ರಂಥಾಲಯದಲ್ಲಿ ಲಭ್ಯವಿದೆ. ಪ್ರಸ್ತುತ 300ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಿಯತಕಾಲಿಕೆಗಳು ಪರಾಮಾರ್ಶನೆಗೆ ಲಭ್ಯವಿದೆ. ಗ್ರಂಥಾಲಯವು ಈಗಿರುವ ಡಿಜಿಟಲ್ ಲೈಬ್ರರಿಯನ್ನು ಉತ್ತಮ ಪಡಿಸುವ ಪ್ರಯತ್ನ ಮಾಡುತ್ತಿದೆ.

ಸದಸ್ಯತ್ವ ಮತ್ತು ಎರವಲು ಚೀಟಿ:

- ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ನಂತರ ವಿತರಿಸಲ್ಪಟ್ಟ ವಿದ್ಯಾರ್ಥಿ ಗುರುತಿನ ಕಾರ್ಡನ್ನು ಪಡೆದ ಮೇಲೆ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಸದಸ್ಯರಾಗಬಹುದು.
- ಸದಸ್ಯತ್ವವನ್ನು ಪಡೆಯಬೇಕಾದರೆ ಸದಸ್ಯತ್ವ ಅರ್ಜಿಯನ್ನು ಭರ್ತಿಮಾಡಿ ಅದರ ಜೊತೆಯಲ್ಲಿ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು 2 ಪಾಸ್‌ಪೋರ್ಟ್ ಹಾಗೂ 1 ಸ್ಟ್ಯಾಂಪ್ ಸೈಜ್ ಅಳತೆಯ ಒಟ್ಟು ಮೂರುಭಾವಚಿತ್ರಗಳನ್ನು ಗ್ರಂಥಾಲಯ ಕಛೇರಿಯಲ್ಲಿ ಸಲ್ಲಿಸಬೇಕು.
- ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು ರೂ. 275/– ಗಳನ್ನು ಹಿಂಪಾವತಿಸುವ ಭದ್ರತಾ ಠೇವಣಿಯಾಗಿ ಪಾವತಿಸಿದ ಮೇಲೆ ಗ್ರಂಥಾಲಯದ ಎರವಲು ಕಾರ್ಡುಗಳನ್ನು ನೀಡಲಾಗುವುದು.
- ಒಂದು ಕಾರ್ಡಿಗೆ ಒಂದು ಗ್ರಂಥವನ್ನು ಪಡೆಯಬಹುದಾಗಿದೆ. ಪಡೆದ ಗ್ರಂಥವನ್ನು 60 ದಿನಗಳವರೆವಿಗೂ ಬಳಸಿಕೊಳ್ಳಬಹುದು. 60 ದಿನಗಳ ನಂತರ ಗ್ರಂಥಾಲಯಕ್ಕೆ ಹಿಂದಿರುಗಿಸದಿದ್ದಲ್ಲಿ ಒಂದು ದಿನಕ್ಕೆ ಒಂದು ಗ್ರಂಥಕ್ಕೆ ಒಂದು ರೂ.ನಂತೆ ದಂಡ ಶುಲ್ಕ ನೀಡಬೇಕಾಗುತ್ತದೆ.
- ಶೈಕ್ಷಣಿಕ ವರ್ಷದ ಕೊನೆಯಲ್ಲಿ ಅಂದರೆ, ಪರೀಕ್ಷೆ ಪ್ರಾರಂಭವಾಗುವ 30 ದಿನಗಳ ಮುಂಚಿತವಾಗಿ ಎರವಲು ಪಡೆದಿರುವ ಗ್ರಂಥಗಳು ಮತ್ತು ಎರವಲು ಕಾರ್ಡುಗಳನ್ನು ಹಿಂದಿರುಗಿಸಲೇಬೇಕು. ತಪ್ಪಿದಲ್ಲಿ, ಪರೀಕ್ಷಾ ಪ್ರವೇಶಾತಿ ಪತ್ರವನ್ನು ನೀಡಲಾಗುವುದಿಲ್ಲ.
- ವಿಶ್ವವಿದ್ಯಾನಿಲಯದ ನಿಬಂಧನೆಗಳ ಪ್ರಕಾರ ವಿದ್ಯಾರ್ಥಿಗಳು ಗ್ರಂಥಾಲಯ ಬೇಬಾಕಿ ಪತ್ರವನ್ನು ಪಡೆಯಬೇಕಾದಲ್ಲಿ ಅವಶ್ಯವಾಗಿ ಗುರುತಿನ ಕಾರ್ಡನ್ನು ತೋರಿಸಿ, ಎರವಲು ಕಾರ್ಡುಗಳನ್ನು ಪಡೆದಿದ್ದಲ್ಲಿ ಅವುಗಳನ್ನು ಕಡ್ಡಾಯವಾಗಿ ಹಿಂದಿರುಗಿಸಬೇಕು.

ಗ್ರಂಥಾಲಯ ಸೇವೆಗಳು:

1. ಗ್ರಂಥಾಲಯದಲ್ಲಿ ಓದುಗರಿಗೆ, ರೆಫರೆನ್ಸ್ ಮತ್ತು ರೆಫರಲ್ ಸೇವೆಗಳು, ಪ್ರಸ್ತುತ ಜಾಗೃತಿ ಸೇವೆ, ಒಪ್ಯಾಕ್ ಸೇವೆ, ಓರಿಯಂಟೇಷನ್ ಸೇವೆ, ಬಿಬ್ಲಿಯೋಗ್ರಾಫಿಕ್ ಸೇವೆ, ನ್ಯೂಸ್ ಪೇಪರ್ ಕ್ಲಿಪ್ಪಿಂಗ್ಸ್ ಸೇವೆ, ಛಾಯಾಪ್ರತಿ ಸೇವೆ, ಇತ್ಯಾದಿ ಸೇವೆಗಳನ್ನು ಕ.ರಾ.ಮು.ವಿ ಗ್ರಂಥಾಲಯವು ಒದಗಿಸುತ್ತದೆ.
2. ಇತರೆ ಸಂಪನ್ಮೂಲಗಳಾದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಅಗತ್ಯತೆಗಳ ಪೂರೈಕೆಗೆ ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಹೊಂದಿದೆ.
3. ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಗ್ರಂಥಾಲಯವು ಕಾರ್ಯನಿರ್ವಹಿಸುತ್ತದೆ.

4. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕ ಸಂಪರ್ಕ ಕಾರ್ಯಕ್ರಮಗಳು, ಹಾಗೂ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಹಾಗೂ ಸಾರ್ವಜನಿಕ ಸರ್ಕಾರಿ ರಜಾ ದಿನಗಳಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ.
5. ಹೌಸ್ ಕೀಪಿಂಗ್ ಆಪರೇಶನ್ಸ್ ಮತ್ತು ಕೆಟಲಾಗ್ ಅನ್ನು ನ್ಯೂಜೆನ್‌ಲಿಬ್ ಇಂಟಿಗ್ರೇಟೆಡ್ ಲೈಬ್ರರಿ ಮ್ಯಾನೇಜ್ ಮೆಂಟ್ ತಂತ್ರಾಂಶದ ಮೂಲಕ ಗಣಕೀಕೃತಗೊಳಿಸಿದೆ.
6. ವೆಬ್ ಆಧಾರಿತ ಆನ್‌ಲೈನ್ ಪಬ್ಲಿಕ್ ಆಕ್ಸಸ್ ಕ್ಯಾಟಲಾಗ್ ಓದುಗರಿಗೆ ಒದಗಿಸಲಾಗುತ್ತಿದೆ.
7. ಗ್ರಂಥಾಲಯದ ವೆಬ್‌ಸೈಟ್ ನಲ್ಲಿ ಇ-ಪತ್ರಿಕೆಗಳು, ಇ-ಪುಸ್ತಕಗಳು, ಹಳೆಯ ಪ್ರಶ್ನೆಪತ್ರಿಕೆಗಳನ್ನು ಇತ್ಯಾದಿ ಮತ್ತು ಗ್ರಂಥಾಲಯವು ಆನ್‌ಲೈನ್ ಪಬ್ಲಿಕ ಆಕ್ಸಸ್ ಕ್ಯಾಟಲಾಗ್ ಲಿಂಕ್ ನಿಲುಕಿಸಿ ಕೊಳ್ಳಲು [http://ksoumysore.edu.in/library.html]ಸಂಪರ್ಕ ಕೊಂಡಿಯನ್ನು ಏರ್ಪಡಿಸಿದೆ.

ಗ್ರಂಥಾಲಯದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳನ್ನು ಹಾಗೂ ಅನಿಸಿಕೆಗಳನ್ನು ksoulibrary@gmail.com. ಇ-ಮೇಲ್ ಐ.ಡಿ ಗೆ ಕಳುಹಿಸಬಹುದು ಹಾಗೂ ದೂರವಾಣಿ ಸಂಖ್ಯೆ: 0821-2519943 ಆಂತರಿಕ ಸಂಪರ್ಕ 525 / 526 ಅನ್ನು ಸಂಪರ್ಕಿಸಬಹುದು.

ಆರೋಗ್ಯ ಕೇಂದ್ರ:

ವಿದ್ಯಾರ್ಥಿಗಳು ವಿವಿ ಆವರಣದಲ್ಲಿ ತಂಗಿರುವಾಗ ಅವರ ತುರ್ತು ಮತ್ತು ತಕ್ಷಣದ ವೈದ್ಯಕೀಯ ಅಗತ್ಯಗಳಿಗೆ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದೆ. ಕೇವಲ ಹೊರ ರೋಗಿ ವಿಭಾಗ (OPD)ಸೌಲಭ್ಯವಿದ್ದು, ವೈದ್ಯರು ಮತ್ತು ಇತರ ಸಿಬ್ಬಂದಿಗಳು ಕರ್ತವ್ಯದಲ್ಲಿ ನಿರತರಿರುತ್ತಾರೆ.

ವಿದ್ಯಾರ್ಥಿ ನಿಲಯ:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿನಿಲಯ ಸೌಲಭ್ಯವನ್ನು ಕಲ್ಪಿಸಿದೆ.

ಪುರುಷ ವಿದ್ಯಾರ್ಥಿ ವಸತಿ ನಿಲಯ:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪುರುಷ ವಿದ್ಯಾರ್ಥಿನಿಲಯದಲ್ಲಿ ಒಟ್ಟು 33 ಕೊಠಡಿಗಳಿವೆ. ಪ್ರತಿ ಕೊಠಡಿಯಲ್ಲಿ ಐದು ವಿದ್ಯಾರ್ಥಿಗಳು ಉಳಿದುಕೊಳ್ಳಬಹುದು. ಆದುದರಿಂದ ಈ ಸೌಲಭ್ಯವು ಒಮ್ಮೆಗೆ 165 ವಿದ್ಯಾರ್ಥಿಗಳಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಬಯಸುವ ವಿದ್ಯಾರ್ಥಿಗಳು ದಿನವೊಂದಕ್ಕೆ ರೂ.180/- ಗಳನ್ನು ಪಾವತಿಸಬೇಕಾಗುತ್ತದೆ.

ಮಹಿಳಾ ವಿದ್ಯಾರ್ಥಿ ವಸತಿ ನಿಲಯ:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಹಿಳಾ ವಿದ್ಯಾರ್ಥಿನಿಯರ ವಸತಿಗಾಗಿ 09 ಕುಟೀರಗಳಿವೆ. ಪ್ರತಿ ಕುಟೀರದಲ್ಲಿ 12 ಮಂದಿ ವಿದ್ಯಾರ್ಥಿನಿಯರು ಉಳಿದುಕೊಳ್ಳಬಹುದಾದುದರಿಂದ ಈ ಸೌಲಭ್ಯವು ಒಮ್ಮೆಗೆ 108 ವಿದ್ಯಾರ್ಥಿನಿಯರಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಲು ಅಪೇಕ್ಷಿಸುವ ವಿದ್ಯಾರ್ಥಿನಿಯರು ದಿನವೊಂದಕ್ಕೆ ರೂ.180/- ಗಳನ್ನು ಪಾವತಿಸಬೇಕಾಗುತ್ತದೆ.

ಕರಾಮುವಿಯು ತನ್ನ ಪರಿಮಿತಿಯಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಮಾಡಿಕೊಡುತ್ತದೆ. ಮೊದಲು ಬಂದವರಿಗೆ ಆದ್ಯತೆ ನೀತಿ ಆಧರಿಸಿ ವಸತಿ ಸೌಲಭ್ಯವನ್ನು ನೀಡಲಾಗುವುದು. ವಸತಿ ಸೌಲಭ್ಯ ದೊರೆಯದೆ ಇರುವವರು ವಸತಿಗಾಗಿ ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಕೊಠಡಿಯಲ್ಲಿರುವಾಗ ವಿಶ್ವವಿದ್ಯಾನಿಲಯದ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟು ಮಾಡುವ ನಿಲಯಾರ್ಥಿಗಳನ್ನು ಶಿಸ್ತುಕ್ರಮಕ್ಕೊಳಪಡಿಸಿ ದಂಡನೆಗೆ ಗುರಿಪಡಿಸಲಾಗುವುದು. ವಸತಿ ಸೌಲಭ್ಯಕ್ಕೆ ಮತ್ತು ವಸತಿ ಶುಲ್ಕ ಪಾವತಿಗಾಗಿ ಕಚೇರಿ ವೇಳೆಯಲ್ಲಿ ಕರಾಮುವಿಯ ಅತಿಥಿ ಗೃಹದ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ – 9844159004

ವಿಶ್ವವಿದ್ಯಾನಿಲಯದಲ್ಲಿರುವ ಇತರೆ ಸೌಲಭ್ಯಗಳು:

- ಸುಸಜ್ಜಿತ ಉಪಹಾರ ಗೃಹ
- ಸ್ಟೇಟ್ ಬ್ಯಾಂಕ್ ಇಂಡಿಯಾ ಮತ್ತು ATM ಸೌಲಭ್ಯ
- ಅಂಚೆ ಕಚೇರಿ
- ವೈಫೈ ಸೌಲಭ್ಯ
- ಸುಸಜ್ಜಿತ, ಸುವ್ಯವಸ್ಥಿತ ಕ್ರೀಡಾಂಗಣ
- ಕುಡಿಯುವ ಶುದ್ಧ ನೀರಿನ ಘಟಕ

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ:

ಕರಾಮುವಿಯ ಸ್ಪರ್ಧಾತ್ಮಕ ತರಬೇತಿ ಕೇಂದ್ರವು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 0821–2515944.

17. ಪ್ರವೇಶಾತಿ ಶುಲ್ಕದ ಮಾಹಿತಿ

1. ಕನಿಷ್ಠ 5 ವರ್ಷಗಳ ಅವಧಿ ಕರ್ನಾಟಕದಲ್ಲಿ ಅಧ್ಯಯನ ಮಾಡಿರುವ ಶ್ರೀಲಂಕಾ/ಬಾಂಗ್ಲಾದೇಶ/ಇಂಡೋನೇಷ್ಯಾ/ಭೂತಾನ್/ನೇಪಾಳ/ಟಿಬೇಟಿಯನ್ ಅಭ್ಯರ್ಥಿಗಳು ಅರ್ಹತಾ ಶುಲ್ಕ ರೂ. 2200/–ಗಳನ್ನು ಪ್ರತಿ ವರ್ಷ ಪಾವತಿಸಬೇಕು.

18. ಪರೀಕ್ಷಾ ನೀತಿಯ ಬಗ್ಗೆ ಮಾಹಿತಿ

➢ **ವಾರ್ಷಿಕ ಪರೀಕ್ಷೆ**

ಬಿ.ಎಡ್. ಪದವಿ ಶಿಕ್ಷಣ ಕ್ರಮಕ್ಕೆ ವಿಶ್ವವಿದ್ಯಾನಿಲಯವು ಪ್ರತಿ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ.

➢ **ಶಿಕ್ಷಣಕ್ರಮ ಪೂರೈಸಲು ನಿಗದಿತ ಅವಧಿ**

ಕಾರ್ಯಕ್ರಮದ ಅವಧಿಯು ಎರಡು ಶೈಕ್ಷಣಿಕ ಅವಧಿಗಳು/ವರ್ಷಗಳು ಆಗಿದೆ. ಆದಾಗ್ಯೂ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಗರಿಷ್ಠ ಐದು ವರ್ಷಗಳ ಅವಧಿಯೊಳಗೆ ಪೂರ್ಣಗೊಳಿಸಲು ಅವಕಾಶ ನೀಡಲಾಗಿದೆ. (NCTE ಪ್ರಕಾರ)

➢ **ಪರೀಕ್ಷಾ ಕ್ರಮ**

ಪ್ರಥಮ ಬಾರಿಗೆ ಪರೀಕ್ಷೆಗೆ (ಪ್ರವೇಶಾತಿ ಪಡೆದ ವರ್ಷ) ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ಎಲ್ಲಾ ಪತ್ರಿಕೆಗಳಿಗೂ (ಇಡೀ ಪರೀಕ್ಷೆಗೆ) ನೋಂದಾಯಿಸಿಕೊಳ್ಳಬೇಕು.

➢ **ಪರೀಕ್ಷಾ ಕೇಂದ್ರಗಳು**

ವಿದ್ಯಾರ್ಥಿಗಳು ಎಷ್ಟು ಸಂಖ್ಯೆಯಲ್ಲಿ ದಾಖಲಾತಿ ಹೊಂದಿದ್ದಾರೆ ಎಂಬುದರ ಆಧಾರದ ಮೇಲೆ ವಿಶ್ವವಿದ್ಯಾನಿಲಯವು ಪರೀಕ್ಷಾ ಕೇಂದ್ರವನ್ನು ಗುರುತಿಸುತ್ತದೆ. ಇಂತಹ ಪರೀಕ್ಷಾ ಕೇಂದ್ರಗಳ ಜೊತೆಗೆ, ಪರೀಕ್ಷಾ ಸುತ್ತೋಲೆಯಲ್ಲಿ ಅಧಿಸೂಚಿಸಿರುವ ಇತರ ಸಂಸ್ಥೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಏನಾದರೂ ಬದಲಾವಣೆಗಳಾದರೆ ಅದನ್ನು ಕ.ರಾ.ಮು.ವಿ.ಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗುವುದು. (www.ksoumysuru.ac.in)

➢ **ಪತ್ರಿಕೆ ವಿನಾಯಿತಿ**

ಬಿ.ಎಡ್. ಶಿಕ್ಷಣ ಕ್ರಮಕ್ಕೆ ವಿಶ್ವವಿದ್ಯಾನಿಲಯದ ಅಧ್ಯಾದೇಶದಂತೆ ಪತ್ರಿಕೆ ವಿನಾಯಿತಿ ನೀಡಲಾಗಿದೆ.

- **ಬಿ.ಎಡ್. ಶಿಕ್ಷಣ ಕ್ರಮದ ಫಲಿತಾಂಶ ಘೋಷಣೆ**

  ಅಭ್ಯರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿ ಪತ್ರಿಕೆಯಲ್ಲಿ 32 ಅಂಕಗಳು ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಸರಾಸರಿ ಶೇ 40 ಅಂಕಗಳನ್ನು ಪಡೆಯಲೇಬೇಕು. ಯಾವ ವಿದ್ಯಾರ್ಥಿಗಳು ಶೇ.40 ಅಂಕಗಳಿಗಿಂತ ಕಡಿಮೆ ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ. ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳಿಗೆ ಪುನಃ ಪರೀಕ್ಷೆಗೆ ಹಾಜರಾಗಬೇಕು.

- **ಕೃಪಾಂಕ ನೀತಿ**

  ಕೃಪಾಂಕಗಳ ನೀಡುವಿಕೆಯು ವಿಶ್ವವಿದ್ಯಾನಿಲಯದ ನಿಯಮಾನುಸಾರ ಇರುತ್ತದೆ.

- **ಬಿ.ಎಡ್. ಶಿಕ್ಷಣ ಕ್ರಮದ ಶ್ರೇಣಿ ಪದ್ಧತಿ**

ಶೇಕಡಾವಾರು % ಅಂಕಗಳು	ಗುಣಮಟ್ಟ	ಗಣಾಂಶ	
75 % ಅಥವಾ ಮೇಲ್ಪಟ್ಟು	ಅತ್ಯುತ್ತಮ(ಎಕ್ಸಲೆಂಟ್)	ಎ	ಉನ್ನತ ಶ್ರೇಣಿ
60–74%	ತುಂಬಾ ಉತ್ತಮ(ವೆರಿಗುಡ್)	ಬಿ	ಪ್ರಥಮ ದರ್ಜೆ
50–59%	ಉತ್ತಮ	ಸಿ	ದ್ವಿತೀಯ ದರ್ಜೆ
40–49%	ತೃಪ್ತಿಕರ	ಡಿ	ಉತ್ತೀರ್ಣ
40% ಕ್ಕಿಂತ ಕಡಿಮೆ	ಅನುತ್ತೀರ್ಣ	ಇ	ಅನುತ್ತೀರ್ಣ

ಮರು ಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿ

ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysuru.ac.in) ನಲ್ಲಿ ಫಲಿತಾಂಶ ಪ್ರಕಟಣೆಗೊಂಡ 14 ದಿನಗಳ ಒಳಗಾಗಿ ಬಿ.ಎಡ್. ಶಿಕ್ಷಣ ಕ್ರಮದ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿಗೆ ಇವುಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ. ಅರ್ಜಿಗಳನ್ನು **ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–6,** ಇವರಿಗೆ ನೋಂದಾಯಿತ ಅಂಚೆಯ ಮೂಲಕ ಸಲ್ಲಿಸಬೇಕು.

ವಾರ್ಷಿಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆ

ಬಿ.ಎಡ್. ಶಿಕ್ಷಣಕ್ರಮದಲ್ಲಿ ವಾರ್ಷಿಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಬೇಕಾದರೆ, ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ನಿಬಂಧನೆಗಳನ್ನು ಪೂರೈಸಿರಬೇಕು.

1) ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶಿಕ್ಷಣಕ್ರಮ, ಬೋಧನಾ ಶುಲ್ಕವನ್ನು ಮಾತ್ರ ಪಾವತಿಸಿರಬೇಕು
2) ನಿಗದಿತ ಶಿಕ್ಷಣಕ್ರಮವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿರಬೇಕು.
3) ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿರಬೇಕು.
4) ಪ್ರವೇಶಾತಿಯು ವಿಶ್ವವಿದ್ಯಾನಿಲಯದಿಂದ ಅನುಮೋದನೆಗೊಂಡಿರಬೇಕು.

ಪರೀಕ್ಷಾ ವೇಳಾಪಟ್ಟಿ

ಪ್ರತಿ ಶಿಕ್ಷಣಕ್ರಮದ ಪರೀಕ್ಷೆಯ ದಿನಾಂಕ ಮತ್ತು ಸಮಯವನ್ನು ತಿಳಿಸುವ ಪರೀಕ್ಷಾ ವೇಳಾಪಟ್ಟಿಯನ್ನು ಎಲ್ಲ ಪ್ರಾದೇಶಿಕ ಕೇಂದ್ರ ಮತ್ತು ಪರೀಕ್ಷಾ ಕೇಂದ್ರಗಳಿಗೆ 15 ದಿನಗಳ ಮುಂಚಿತವಾಗಿ ಕಳುಹಿಸಲಾಗುವುದು. ವಿದ್ಯಾರ್ಥಿಗಳು ವಿವರವಾದ ವೇಳಾಪಟ್ಟಿಯನ್ನು ಹತ್ತಿರದ ಪ್ರಾದೇಶಿಕ ಕೇಂದ್ರ, ಅಧ್ಯಯನ ಕೇಂದ್ರ ಹಾಗೂ ಪರೀಕ್ಷಾ ಕೇಂದ್ರ ಅಥವಾ ಕರಾಮುವಿಯ

ವೆಬ್‌ಸೈಟ್(www.ksoumysuru.ac.in) ಸಂಪರ್ಕಿಸುವ ಮೂಲಕ ಪಡೆಯಬಹುದು. ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ವೇಳಾಪಟ್ಟಿಯನ್ನು ಕಳುಹಿಸಲಾಗುವುದಿಲ್ಲ.

ರ್‍ಯಾಂಕ್ ಘೋಷಣೆಯ ನಿಯಮಗಳು:

1. ಪುನರಾವರ್ತಿತ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲು ಅರ್ಹರಾಗಿರುವುದಿಲ್ಲ.
2. ದರ್ಜೆ ಉತ್ತಮೀಕರಣ (CIG) ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಕೃಪಾಂಕ ಪಡೆದ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲು ಅರ್ಹರಾಗಿರುವುದಿಲ್ಲ.
3. ಗರಿಷ್ಠ 10 ರ್‍ಯಾಂಕ್ ನೀಡಲು ಮಾತ್ರ ಅವಕಾಶವಿರುತ್ತದೆ (ಅಥವಾ ಒಟ್ಟಾರೆ ಶೇ. 10 ರಷ್ಟು ಅಭ್ಯರ್ಥಿಗಳು).

19. ಅಭ್ಯರ್ಥಿಗಳಿಗೆ ಪರೀಕ್ಷೆ ಕುರಿತ ಮಾಹಿತಿ

- ವಿದ್ಯಾರ್ಥಿಗಳು ಪರೀಕ್ಷಾ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು.
- ವಿದ್ಯಾರ್ಥಿಗಳು ಅವರಿಗೆ ನಿಗದಿತವಾದ ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷೆಯನ್ನು ಬರೆಯಬೇಕು. ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಇವರ ನಿರ್ದಿಷ್ಟ ಅನುಮತಿ ಪಡೆಯದೆ ಯಾವುದೇ ಇತರ ಕೇಂದ್ರಗಳಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವಂತಿಲ್ಲ.
- ಒಮ್ಮೆ ಆಯ್ಕೆ ಮಾಡಿದ ಕೇಂದ್ರವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಗಳಿಂದಾಗಿ ವಿದ್ಯಾರ್ಥಿಯು ಪರೀಕ್ಷಾಕೇಂದ್ರವನ್ನು ಬದಲಾಯಿಸಿಕೊಳ್ಳಬೇಕಾದರೆ ಕುಲಸಚಿವರು (ಪರೀಕ್ಷಾಂಗ) ಇವರ ಅನುಮತಿಯನ್ನು ಪಡೆಯಬೇಕು. ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಬೇಕು.
- ಪರೀಕ್ಷಾ ಫಲಿತಾಂಶವನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysuru.ac.in) ನಲ್ಲಿ ಪ್ರಕಟಿಸಲಾಗುವುದು.
- ಮರು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ ಪರೀಕ್ಷಾ ಅರ್ಜಿಯನ್ನು ಪಡೆಯಬೇಕು.
- ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳ ಮುಖಾಂತರ ಪಾವತಿಸಬೇಕು. ಒಮ್ಮೆ ಪಾವತಿಸಲಾದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರು ಪಾವತಿಸಲಾಗುವುದಿಲ್ಲ. ವಿದ್ಯಾರ್ಥಿಯು ನಿರ್ದಿಷ್ಟ ಪರೀಕ್ಷೆಗೆ ಹಾಜರಾಗದಿದ್ದರೂ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ ಅಥವಾ ಮರು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.
- ವಿದ್ಯಾರ್ಥಿಗಳು ಪರೀಕ್ಷೆಗೆ ಮೂರು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಂದ ಪ್ರವೇಶ ಪತ್ರಗಳನ್ನು ಪಡೆಯತಕ್ಕದ್ದು ಹಾಗೂ ಕರಾಮುವಿ ವೆಬ್‌ಸೈಟ್ (www.ksoumysuru.ac.in) ನಿಂದಲೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವ ಅಭ್ಯರ್ಥಿಗಳಿಗೂ ಪ್ರವೇಶ ಪತ್ರವನ್ನು ಅಂಚೆಯ ಮೂಲಕ ರವಾನಿಸುವುದಿಲ್ಲ.
- ವಲಸೆ ಪ್ರಮಾಣ ಪತ್ರವನ್ನು ಪಡೆಯಲು ವಿದ್ಯಾರ್ಥಿಯು 'ಕುಲಸಚಿವ (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 06, ಇವರಿಗೆ ಅರ್ಜಿ ಸಲ್ಲಿಸಬೇಕು. ನಿಗದಿತ ಅರ್ಜಿಯನ್ನು ಗೊತ್ತುಪಡಿಸಿದ ಅಂಕಪಟ್ಟಿಯ ನೆರಳಚ್ಚು ಪತ್ರಿ ಮತ್ತು ಶುಲ್ಕ ಪಾವತಿ ಮಾಡಿದ ಚಲನ್ ಜೊತೆ ಲಗತ್ತಿಸಿ ಕಳುಹಿಸಬೇಕು.
- ವಿಶ್ವವಿದ್ಯಾನಿಲಯದಿಂದ ಫಲಿತಾಂಶ ಘೋಷಣೆಯಾದ ಮೇಲೆ ನಿಗದಿತ ಶುಲ್ಕಗಳನ್ನು ಪಾವತಿ ಮಾಡಿ ತೇರ್ಗಡೆಯಾದ ಅಂಕಪಟ್ಟಿಗಳ ಛಾಯಾ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ (Provisional Pass Certificate),

ತಾತ್ಕಾಲಿಕ ಪ್ರಮಾಣ ಪತ್ರವನ್ನು ಕುಲಸಚಿವ (ಪರೀಕ್ಷಾಂಗ) ಇವರು ವಿದ್ಯಾರ್ಥಿಯ ಕೋರಿಕೆಯ ಮೇರೆಗೆ ವಿತರಿಸುವರು.

- ಎಲ್ಲಾ ತರಹದ ಸುತ್ತೋಲೆಗಳು, ಪರೀಕ್ಷಾ ಪ್ರಕಟಣೆಗಳು ಇನ್ನಿತರ ಪತ್ರ ವ್ಯವಹಾರಗಳನ್ನು ಸಾಮಾನ್ಯ ಅಂಚೆ ಮೂಲಕ ವಿದ್ಯಾರ್ಥಿಗಳಿಗೆ ರವಾನಿಸಲಾಗುವುದು. ಅರ್ಜಿ, ಸುತ್ತೋಲೆ, ಪ್ರಕಟಣೆ ಮತ್ತಿತರ ಮಾಹಿತಿಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರ, ಪ್ರಾದೇಶಿಕ ಕೇಂದ್ರ ಅಥವಾ ಕೇಂದ್ರ ಕಚೇರಿಯಿಂದಲು ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಕಾಲ ಕಾಲಕ್ಕೆ ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ ನೂತನ ಮಾಹಿತಿಗಳನ್ನು ಪಡೆಯಬಹುದು.
- ಅಂಕಪಟ್ಟಿಯನ್ನು ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ವಿಳಾಸಕ್ಕೆ ನೋಂದಾಯಿತ ಅಂಚೆ/ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಿಕೊಡಲಾಗುವುದು. 50 ದಿನಗಳ ಅವಧಿಯೊಳಗೆ ಅಂಕಪಟ್ಟಿ ತಲುಪದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ವೆಬ್‌ಸೈಟ್ ಫಲಿತಾಂಶದ ಪ್ರತಿಯನ್ನು ಲಗತ್ತಿಸಿ ಅಗತ್ಯ ಕ್ರಮ ಕೈಗೊಳ್ಳಲು ಕೋರಿ ಕುಲಸಚಿವರು (ಪರೀಕ್ಷಾಂಗ), ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–06 ಇವರಿಗೆ ಪತ್ರ ಬರೆಯಬೇಕು. ಅಂಕಪಟ್ಟಿಯಲ್ಲಿ ಏನಾದರೂ ದೋಷ ಕಂಡು ಬಂದಲ್ಲಿ ಕೂಡಲೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಸರಿಪಡಿಸಿಕೊಳ್ಳತಕ್ಕದ್ದು.
- ಒಂದು ವೇಳೆ ಆಂತರಿಕ ನಿಬಂಧಗಳನ್ನು ಸಲ್ಲಿಸಿಯೂ ಅದರ ಅಂಕಗಳು ಪರೀಕ್ಷಾ ಫಲಿತಾಂಶದಲ್ಲಿ ಪ್ರಕಟಗೊಳ್ಳದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಫಲಿತಾಂಶ ಪ್ರಕಟಗೊಂಡ 30 ದಿನಗಳೊಳಗಾಗಿ ನಿಬಂಧನೆಗಳನ್ನು ಸಲ್ಲಿಸಿದ ದಾಖಲೆಗಳೊಂದಿಗೆ ಆಯಾ ಸಂಯೋಜನಾಧಿಕಾರಿಗಳನ್ನು ಸಂಪರ್ಕಿಸುವುದು.
- ವಿದ್ಯಾರ್ಥಿಗಳು ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಪರೀಕ್ಷೆ ಬರೆಯಬಹುದು.

20. ಘಟಿಕೋತ್ಸವ ಪ್ರಮಾಣ ಪತ್ರ (ಪದವಿ ಪ್ರಮಾಣ ಪತ್ರ)

(ಘಟಿಕೋತ್ಸವ / ಪದವಿ ಪ್ರಮಾಣ ಪತ್ರಗಳ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ನೋಡಿ) ಘಟಿಕೋತ್ಸವವನ್ನು ಸಂಬಂಧಿತ ಶಿಕ್ಷಣ ಕ್ರಮಗಳ ಫಲಿತಾಂಶವು ಘೋಷಣೆಯಾದ ನಂತರ ವಿಶ್ವವಿದ್ಯಾನಿಲಯವು ನಡೆಸುತ್ತದೆ. ಇದರ ಬಗ್ಗೆ ಪ್ರತ್ಯೇಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನಿಗದಿತ ಸಮಯದೊಳಗೆ ಕಳಿಸಲಾಗುತ್ತದೆ.

21. ಗುಣಾತ್ಮಕ ಕ್ರಮಗಳು

ವಿದ್ಯಾರ್ಥಿಗಳಿಗೆ ಗುಣಮಟ್ಟದ ಸೇವೆಯನ್ನು ಒದಗಿಸುವಲ್ಲಿ ವಿಶ್ವವಿದ್ಯಾನಿಲಯವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಆಂತರಿಕ ಗುಣಮಟ್ಟ ಭರವಸೆ ಕೇಂದ್ರವನ್ನು ಯು.ಜಿ.ಸಿ. ಆದೇಶದ ಅನುಸಾರ ರಚನೆ ಮಾಡಲಾಗಿದೆ.

ಆಂತರಿಕ ಗುಣಮಟ್ಟ ಭರವಸೆ ಕೇಂದ್ರ (ಸಿ.ಐ.ಕ್ಯೂ.ಎ.)

ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ಪ್ರತಿಯೊಂದು ಹಂತದಲ್ಲೂ ಗುಣಮಟ್ಟ ಸೇವೆಯನ್ನು ಒದಗಿಸಲು ಅಗತ್ಯ ಹಾಗೂ ಹಲವಾರು ಕ್ರಮಗಳನ್ನು ನೀಡುವ ಸಲುವಾಗಿ ಸಹಕರಿಸುವ ವರ್ಗಗಳೊಂದಿಗೆ (ಸ್ಟೇಕ್ ಹೋಲ್ಡರ್ಸ್) ಅನ್ಯೋನ್ಯ ಸಂಬಂಧವನ್ನು/ ಪರಸ್ಪರ ಕಾರ್ಯಚಟುವಟಿಕೆಯನ್ನು ಮಾಡುತ್ತಿದೆ. ಅಂದರೆ

ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ವಿದ್ಯಾರ್ಥಿ ಪ್ರವೇಶ ಪಡೆದ ದಿನದಿಂದ ಪ್ರಾರಂಭಿಸಿ ತನ್ನ ಶೈಕ್ಷಣಿಕ ಗುರಿಗಳನ್ನು ಪೂರೈಸಿಕೊಳ್ಳುವ ಅವಧಿಯವರೆವಿಗೂ ಸಹಕಾರ ಒದಗಿಸುತ್ತದೆ.

22. ಮಾಹಿತಿ ಮತ್ತು ಮಾರ್ಗದರ್ಶನ ಘಟಕ

ಮಾಹಿತಿ ಮತ್ತು ಮಾರ್ಗದರ್ಶನ ಘಟಕವು ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತದೆ. ಅಂದರೆ ವಿಶ್ವವಿದ್ಯಾನಿಲಯವು ಒದಗಿಸುತ್ತಿರುವ ಶಿಕ್ಷಣಕ್ರಮಗಳು, ಪ್ರವೇಶಾತಿ, ಅಧ್ಯಯನ ಸಾಮಗ್ರಿಗಳು, ಸಂಪರ್ಕ ಕಾರ್ಯಕ್ರಮ, ಸಮಾಲೋಚನಾ ಕಾರ್ಯಕ್ರಮ, ಪರೀಕ್ಷೆಗಳು, ಪರೀಕ್ಷಾ ಫಲಿತಾಂಶ, ಅಂಕಪಟ್ಟಿಗಳು, ಅರ್ಹತಾ ಪತ್ರಗಳು, ವಿದ್ಯಾರ್ಥಿನಿಲಯದ ಸೌಲಭ್ಯ ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ. ಮಾಹಿತಿ ಮತ್ತು ಮಾಗದರ್ಶನ ಘಟಕದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ವೈಯಕ್ತಿಕವಾಗಿ ಈ ಘಟಕಕ್ಕೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆಯಬಹುದು. ಅಲ್ಲದೆ ದೂರವಾಣಿ ಮುಖಾಂತರವಾಗಿಯೂ ಘಟಕವನ್ನು ಸಂಪರ್ಕಿಸಬಹುದು. ಈ ಘಟಕದ ದೂರವಾಣಿ ಸಂಖ್ಯೆಗಳು 98453–63573 ಮತ್ತು 94494–89749, ಈ ಘಟಕದ ಕಛೇರಿಯು ಪ್ರವೇಶಾತಿ ವಿಭಾಗದ ಮುಖ್ಯದ್ವಾರದಲ್ಲಿದೆ.

ಮಾರ್ಗದರ್ಶನ ಮತ್ತು ಸಮಾಲೋಚನೆ

ವಿದ್ಯಾರ್ಥಿ ಜೀವನವು ಸಂಕೀರ್ಣ ಹಾಗೂ ಸೂಕ್ಷ್ಮತೆಯುಳ್ಳದ್ದಾಗಿದೆ. ವಿದ್ಯಾರ್ಥಿಗಳು 21 ನೆಯ ಶತಮಾನದಲ್ಲಿ ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮತ್ತು ಸಮಾಲೋಚನೆಯ ಅಗತ್ಯತೆ ಇದೆ. ಶೈಕ್ಷಣಿಕ, ಕೌಶಲ್ಯ ಅಭಿವೃದ್ಧಿ, ವೃತ್ತಿ ತಿಳುವಳಿಕೆ, ಜೀವನ ಕೌಶಲಗಳು, ಸ್ಥಾನ ನಿಯುಕ್ತಿಕರಣ (ಉದ್ಯೋಗ ಪಡೆಯುವಿಕೆ), ಉನ್ನತ ಶಿಕ್ಷಣದ ಅವಕಾಶ ಹಾಗೂ ಇನ್ನಿತರ ಅಂಶಗಳಿಗೆ ಮಾರ್ಗದರ್ಶನ ಅಗತ್ಯವಾಗುತ್ತದೆ. ವಿಶ್ವವಿದ್ಯಾನಿಲಯವು ಸುಸಜ್ಜಿತವಾದ ಮಾರ್ಗದರ್ಶನ ಮತ್ತು ಸಮಾಲೋಚನಾ ಕೇಂದ್ರವನ್ನು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸ್ಥಾಪಿಸಿದೆ ಮತ್ತು ಅನ್ಯೋನ್ಯ ಕ್ರಿಯಾ ವೇದಿಕೆಯನ್ನು ಆರಂಭಿಸುತ್ತಿದೆ.

ಅನ್ಯೋನ್ಯ (Interactive) ಕ್ರಿಯಾ ವೇದಿಕೆ

ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಮಾಹಿತಿ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ದೊರೆತಿರುವ ಲಾಭಗಳನ್ನು ಬಳಸಿಕೊಳ್ಳಲು ವಿಶ್ವವಿದ್ಯಾನಿಲಯವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಅನ್ಯೋನ್ಯ ಕ್ರಿಯಾ ವೇದಿಕೆ, ವರ್ಚ್ಯುಯಲ್ ತರಗತಿ ಕೊಠಡಿ, ತಜ್ಞರಿಂದ ಉಪನ್ಯಾಸಗಳನ್ನು ನೀಡುವುದು, ಡಿಜಿಟಲ್ ಗ್ರಂಥಾಲಯ ಸೇವೆಗಳು ಮತ್ತು ಇನ್ನಿತರ ಬೆಂಬಲ ಸೇವೆಗಳನ್ನು ಮುಂದಿನ ದಿನಗಳಲ್ಲಿ ಸೃಜಿಸಲಾಗುವುದು.

23. ಕುಂದುಕೊರತೆ ನಿವಾರಣಾ ಘಟಕ

ವಿದ್ಯಾರ್ಥಿಗಳಿಗೆ ಉತ್ತಮ ಮತ್ತು ಸಮಯಕ್ಕೆ ಅಗತ್ಯವಾದ ಸೇವೆಗಳನ್ನು ಒದಗಿಸುವುದು ಅತ್ಯಗತ್ಯವಾಗಿದೆ. ಕ.ರಾ.ಮು.ವಿ. ಇದಕ್ಕಾಗಿ ಕುಂದುಕೊರತೆ ನಿವಾರಣಾ ಘಟಕವನ್ನು ಆರಂಭಿಸಿ ಸಂಯೋಜನಾಧಿಕಾರಿಗಳನ್ನು ನೇಮಿಸಿದೆ. ಈ ಘಟಕವು ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯನಿರ್ವಹಿಸುತ್ತದೆ. ಅಂದರೆ, ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳು, ವಿದ್ಯಾರ್ಥಿಗಳ ಬೆಂಬಲ ಸೇವೆಗಳು ಮತ್ತು ಪರೀಕ್ಷೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುತ್ತದೆ. ವಿದ್ಯಾರ್ಥಿಗಳು ಈ ಘಟಕಕ್ಕೆ ಲಿಖಿತವಾಗಿ ಅಥವಾ ದೂರವಾಣಿಯ ಮೂಲಕ ಕುಂದುಕೊರತೆ ಕುರಿತ ಅಹವಾಲು ಸಲ್ಲಿಬಹುದು. ಈ ಘಟಕದಲ್ಲಿ ಕಾರ್ಯನಿರ್ವಹಿಸುವ ಸಂಯೋಜನಾಧಿಕಾರಿಗಳು ಮತ್ತು ದೂರವಾಣಿ ಸಂಖ್ಯೆ– ಮುಂದಿನಂತಿದೆ –

ಶ್ರೀ ಡಿ.ಎಂ.ಮಹೇಶ್, ಮೊ: 9901249102 ಮತ್ತು **ಡಾ. ಎ.ವೈ. ವಿಜಯಕುಮಾರ್** ಮೊ: 9845363573

ಈ ಘಟಕದ ಸಂಯೋಜನಾಧಿಕಾರಿಗಳು ವಿದ್ಯಾರ್ಥಿಗಳ ಕುಂದು–ಕೊರತೆಗಳನ್ನು ಪರೀಕ್ಷಿಸಿ, ಅವಲೋಕಿಸಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸುವರು.

ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಕರಾಮುವಿ ಜಾಲತಾಣಕ್ಕೆ ಹೋಗಿ ತಮ್ಮ ಸಮಸ್ಯೆಗಳನ್ನು ದಾಖಲಿಸಬಹುದು.
ವೆಬ್ ಸೈಟ್: http://www.ksoumysuru.ac.in

ಆನ್‌ಲೈನ್‌ನಲ್ಲಿಯೂ ಕೂಡ ವಿದ್ಯಾರ್ಥಿಗಳು ಯು.ಜಿ.ಸಿ ಎಸ್.ಜಿ ಪೋರ್ಟಲ್‌ಗೆ ತಮ್ಮ ಕುಂದು-ಕೊರತೆಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು. ಈ ವ್ಯವಸ್ಥೆಯ ನೊಡೆಲ್ ಅಧಿಕಾರಿಯ ಹೆಸರು ಮತ್ತು ವಿಳಾಸ:

ಡಾ. ಜೆ.ಎಸ್. ಚಂದ್ರಶೇಖರ್
ನೊಡೆಲ್ ಅಧಿಕಾರಿ, ವಿದ್ಯಾರ್ಥಿ ಕುಂದು-ಕೊರತೆ ನಿವಾರಣಾ ಘಟಕ
ಕ.ರಾ.ಮು.ವಿ. ಮೈಸೂರು **ಮೊಬೈಲ್. 81972-42133**

24. ವಿಶ್ವವಿದ್ಯಾನಿಲಯವು ನೀಡುತ್ತಿರುವ ಇತರೆ ಶಿಕ್ಷಣ ಕ್ರಮಗಳು

ಅ. ಸ್ನಾತಕ ಕಾರ್ಯಕ್ರಮಗಳು (Under Graduate)			
ಕ್ರ.ಸಂ.	ಶಿಕ್ಷಣ ಕ್ರಮ	ಅವಧಿ	ಕ್ರಮ
1	ಬಿ.ಎ	3 ವರ್ಷ	ವಾರ್ಷಿಕ
2	ಬಿ.ಕಾಂ	3 ವರ್ಷ	ವಾರ್ಷಿಕ
3	ಬಿ.ಲಿಬ್ & ಐ.ಎಸ್ಸಿ	1 ವರ್ಷ	ಸೆಮಿಸ್ಟರ್
4	ಬಿ.ಎಸ್ಸಿ. – ಜನರಲ್	3 ವರ್ಷ	ಸೆಮಿಸ್ಟರ್
5	ಬಿ.ಎಸ್ಸಿ. – ಮಾಹಿತಿ ತಂತ್ರಜ್ಞಾನ (ಹಾನರ್ಸ್)	3 ವರ್ಷ	ಸೆಮಿಸ್ಟರ್
6	ಬಿ.ಎಸ್.ಡಬ್ಲ್ಯೂ	3 ವರ್ಷ	ಸೆಮಿಸ್ಟರ್
7	ಬಿ.ಬಿ.ಎ	3 ವರ್ಷ	ಸೆಮಿಸ್ಟರ್
8	ಬಿ.ಸಿ.ಎ.	3 ವರ್ಷ	ಸೆಮಿಸ್ಟರ್
9	ಬಿ.ಇಡ್	2 ವರ್ಷ	ವಾರ್ಷಿಕ

ಆ. ಸ್ನಾತಕೋತ್ತರ ಕಾರ್ಯಕ್ರಮಗಳು (Post Graduate)			
ಕ್ರ.ಸಂ.	ಶಿಕ್ಷಣ ಕ್ರಮ	ಅವಧಿ	ಕ್ರಮ
1	ಎಂ.ಎ. ಕನ್ನಡ	2 ವರ್ಷಗಳು	ಸೆಮಿಸ್ಟರ್
2	ಎಂ.ಎ. ಇಂಗ್ಲಿಷ್	2 ವರ್ಷಗಳು	ಸೆಮಿಸ್ಟರ್
3	ಎಂ.ಎ. ಹಿಂದಿ	2 ವರ್ಷಗಳು	ಸೆಮಿಸ್ಟರ್
4	ಎಂ.ಎ. ಉರ್ದು	2 ವರ್ಷಗಳು	ಸೆಮಿಸ್ಟರ್
5	ಎಂ.ಎ. ಸಂಸ್ಕೃತ	2 ವರ್ಷಗಳು	ವಾರ್ಷಿಕ
6	ಎಂ.ಎ ತೆಲುಗು	2 ವರ್ಷಗಳು	ಸೆಮಿಸ್ಟರ್
7	ಎಂ.ಎ. ಇತಿಹಾಸ	2 ವರ್ಷಗಳು	ಸೆಮಿಸ್ಟರ್
8	ಎಂ.ಎ. ಅರ್ಥಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
9	ಎಂ.ಎ. ರಾಜ್ಯಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
10	ಎಂ.ಎ. ಸಾರ್ವಜನಿಕ ಆಡಳಿತ	2 ವರ್ಷಗಳು	ಸೆಮಿಸ್ಟರ್
11	ಎಂ.ಎ. ಸಮಾಜಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
12	ಎಂ.ಎ. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ	2 ವರ್ಷಗಳು	ಸೆಮಿಸ್ಟರ್
13	ಎಂ.ಎ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ	2 ವರ್ಷಗಳು	ಸೆಮಿಸ್ಟರ್
14	ಎಂ.ಎ. ಶಿಕ್ಷಣ	2 ವರ್ಷಗಳು	ಸೆಮಿಸ್ಟರ್
15	ಎಂ.ಕಾಂ	2 ವರ್ಷಗಳು	ಸೆಮಿಸ್ಟರ್
16	ಎಂ.ಬಿ.ಎ	2 ವರ್ಷಗಳು	ಸೆಮಿಸ್ಟರ್
17	ಎಂ.ಎಸ್.ಡಬ್ಲ್ಯೂ	2 ವರ್ಷಗಳು	ಸೆಮಿಸ್ಟರ್
18	ಎಂ.ಸಿ.ಎ	2 ವರ್ಷಗಳು	ಸೆಮಿಸ್ಟರ್
19	ಎಂ.ಲಿಬ್ & ಐ.ಎಸ್ಸಿ.	1 ವರ್ಷ	ಸೆಮಿಸ್ಟರ್
20	ಎಂ.ಎಸ್ಸಿ ಜೀವರಸಾಯನಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
21	ಎಂ.ಎಸ್ಸಿ ರಸಾಯನಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
22	ಎಂ.ಎಸ್ಸಿ ಪರಿಸರ ವಿಜ್ಞಾನ	2 ವರ್ಷಗಳು	ಸೆಮಿಸ್ಟರ್
23	ಎಂ.ಎಸ್ಸಿ ಭೂಗೋಳ ಶಾಸ್ತ್ರ	2 ವರ್ಷಗಳು	ಸೆಮಿಸ್ಟರ್

24	ಎಂ.ಎಸ್ಸಿ ಗಣಿತ ಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
25	ಎಂ.ಎಸ್ಸಿ ಭೌತಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
26	ಎಂ.ಎಸ್ಸಿ ಮಾಹಿತಿ ತಂತ್ರಜ್ಞಾನ	2 ವರ್ಷಗಳು	ಸೆಮಿಸ್ಟರ್
27	ಎಂ.ಎಸ್ಸಿ ಗಣಕ ವಿಜ್ಞಾನ	2 ವರ್ಷಗಳು	ಸೆಮಿಸ್ಟರ್
28	ಎಂ.ಎಸ್ಸಿ ಡಾಟಾ ಸೈನ್ಸ್	2 ವರ್ಷಗಳು	ಸೆಮಿಸ್ಟರ್
29	ಎಂ.ಎಸ್ಸಿ. – ಸಸ್ಯಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
30	ಎಂ.ಎಸ್ಸಿ. – ಪ್ರಾಣಿಶಾಸ್ತ್ರ	2 ವರ್ಷಗಳು	ಸೆಮಿಸ್ಟರ್
31	ಎಂ.ಎಸ್ಸಿ – ಭೂವಿಜ್ಞಾನ	2 ವರ್ಷಗಳು	ಸೆಮಿಸ್ಟರ್
32	ಎಂ.ಎಸ್ಸಿ – ಲೈಫ್‌ಸೈನ್ಸ್	2 ವರ್ಷಗಳು	ಸೆಮಿಸ್ಟರ್

ಇ. ಪೋಸ್ಟ್ ಗ್ರಾಜುಯೇಷನ್ ಬೇಸ್ಡ್ ಸರ್ಟಿಫಿಕೇಟ್ ಕಾರ್ಯಕ್ರಮಗಳು (P.G. Certificate Programmes)

ಕ್ರ. ಸಂ.	ಶಿಕ್ಷಣ ಕ್ರಮ	ಅವಧಿ	ಕ್ರಮ
1	ಇಂಗ್ಲಿಷ್‌ನಲ್ಲಿ ಪೋಸ್ಟ್ ಗ್ರಾಜುಯೇಷನ್ ಸರ್ಟಿಫಿಕೇಟ್ (ಪಿಜಿಸಿ ಇ)	1 ವರ್ಷ	ವಾರ್ಷಿಕ
2	ಕಮ್ಯುನಿಕೇಟಿವ್ ಇಂಗ್ಲಿಷ್ ಪೋಸ್ಟ್ ಗ್ರಾಜುಯೇಷನ್ ಸರ್ಟಿಫಿಕೇಟ್ (ಪಿಜಿಸಿ ಸಿಇ)	1 ವರ್ಷ	ವಾರ್ಷಿಕ
3	ಮಾರುಕಟ್ಟೆ ನಿರ್ವಹಣಾಶಾಸ್ತ್ರದಲ್ಲಿ ಪೋಸ್ಟ್ ಗ್ರಾಜುಯೇಷನ್ ಸರ್ಟಿಫಿಕೇಟ್ (ಪಿಜಿಸಿ ಎಂಎಂ)	1 ವರ್ಷ	ವಾರ್ಷಿಕ
4	ಮಾನವ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಪೋಸ್ಟ್ ಗ್ರಾಜುಯೇಷನ್(ಪಿಜಿಸಿ ಎಚ್‌ಆರ್‌ಎಂ)	1 ವರ್ಷ	ವಾರ್ಷಿಕ
5	ವ್ಯವಹಾರಿಕ ನಿರ್ವಹಣೆಯಲ್ಲಿ ಪೋಸ್ಟ್ ಗ್ರಾಜುಯೇಷನ್(ಪಿಜಿಸಿ ಬಿಎ)	1 ವರ್ಷ	ವಾರ್ಷಿಕ
6	ಹಣಕಾಸು ನಿರ್ವಹಣೆಯಲ್ಲಿ ಪೋಸ್ಟ್ ಗ್ರಾಜುಯೇಷನ್(ಪಿಜಿಸಿ ಎಫ್‌ಎಂ)	1 ವರ್ಷ	ವಾರ್ಷಿಕ
7	ವ್ಯವಹಾರಿಕ ಕಾನೂನು ಪೋಸ್ಟ್ ಗ್ರಾಜುಯೇಷನ್ (ಪಿಜಿಸಿ ಬಿಎಲ್)	1 ವರ್ಷ	ವಾರ್ಷಿಕ
8	ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಪೋಸ್ಟ್ ಗ್ರಾಜುಯೇಷನ್ ಡಿಪ್ಲೊಮಾ (ಪಿಜಿಸಿ ಜೆಎಂಸಿ)	1 ವರ್ಷ	ವಾರ್ಷಿಕ
9	ಪೌಷ್ಟಿಕತೆ ಮತ್ತು ಪಥ್ಯಶಾಸ್ತ್ರ ಪೋಸ್ಟ್ ಗ್ರಾಜುಯೇಷನ್ (ಪಿಜಿಸಿ ಎನ್‌ಡಿ)	1 ವರ್ಷ	ವಾರ್ಷಿಕ
10	ಕುವೆಂಪು ಸಾಹಿತ್ಯ ಪೋಸ್ಟ್ ಗ್ರಾಜುಯೇಷನ್ (ಪಿಜಿಸಿ ಕೆಎಸ್)	1 ವರ್ಷ	ವಾರ್ಷಿಕ
11	ಮಾಹಿತಿ ತಂತ್ರಜ್ಞಾನ ಪೋಸ್ಟ್ ಗ್ರಾಜುಯೇಷನ್ (ಪಿಜಿಸಿ ಐಟಿ)	1 ವರ್ಷ	ವಾರ್ಷಿಕ
12	ಕಂಪ್ಯೂಟರ್ ಅಪ್ಲಿಕೇಷನ್ ಪೋಸ್ಟ್ ಗ್ರಾಜುಯೇಷನ್ (ಪಿಜಿಸಿ ಸಿಎ)	1 ವರ್ಷ	ವಾರ್ಷಿಕ
